ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖ ಪತ್ರಿಕೆ

ಸಂಪುಟ 2 ಸಂಚಿಕೆ 42 ಅಕ್ಟೋಬರ್ 19, 1980 ಬೆಲೆ : 50 ಪೈಸೆ

ರಾಜಕೀಯ ಬೇಡ

ಸಂಪಾದಕೀಯ

ಕರ್ನಾಟಕ ರಾಜ್ಯದಾದ್ಯಂತ ರೈತರ ಚಳುವಳಿಯು ವ್ಯಾಪಕವಾಗುತ್ತಿದ್ದಂತೆಯೇ "ನಮಗೆ ಯಾವ ರಾಜಕೀಯವೂ ಬೇಡ. ಯಾವ ರಾಜಕೀಯ ಪಕ್ಷಕ್ಕೂ ರೈತ ಚಳುವಳಿಗೂ ಸಂಬಂಧವಿಲ್ಲ; ಯಾವುದೇ ರಾಜಕೀಯ ಪಕ್ಷದ ಸದಸ್ಯನಿಗೂ ಈ ರೈತ ಚಳುವಳಿಯಲ್ಲಿ ಪ್ರವೇಶವಿಲ್ಲ" ಎಂಬಿತ್ಯಾದಿ ಮಾತುಗಳು ರೈತ ಚಳುವಳಿಯ ಹಲವು ಮುಂದಾಳುಗಳ ಬಾಯಿಯಿಂದ ಕೇಳಿಬರುತ್ತಿದೆ. ತಮಿಳುನಾಡಿನ ರೈತ ಚಳುವಳಿಯ ಮುಖಂಡ ನಾರಾಯಣಸ್ವಾಮಿ ನಾಯ್ಡು ಅವರ ವಾದವನ್ನೆ ಕೆಲವರು ಮುಂದಿಡುವುದೂ ಕಂಡುಬಂದಿದೆ. ಹಾಗೆಯೇ ಇನ್ನು ಕೆಲವೆಡೆ "ಸಂಘಟಿತ ಕಾರ್ಮಿಕರು ನಮಗೆ ವಿರೋಧ, ಪೇಟೆಯವರೆಲ್ಲಾ ನಮ್ಮ ವಿರೋಧಿಗಳು" ಎಂಬಿತ್ಯಾದಿ ಮಾತುಗಳು ಕೆಲವೆಡೆ ಕೇಳಿ ಬಂದಿದೆ.

ನಮ್ಮ ರಾಷ್ಟ್ರವನ್ನು ಮತ್ತು ರಾಜ್ಯವನ್ನಾಳಿಕೊಂಡು ಬಂದ ಪ್ರಮುಖ ರಾಜಕೀಯ ಪಕ್ಷಗಳ ಧೋರಣೆ ಮತ್ತು ಜನರ ಪ್ರತಿನಿಧಿಗಳೆನಿಸಿಕೊಂಡ ಶಾಸಕರು ಜನತೆಯ ಸಮಸ್ಯೆಗಳ ಬಗ್ಗೆ ತೋರಿದ ಔದಾಸೀನ್ಯ ಹಾಗೂ ಪಕ್ಷಾಂತರ ಮತ್ತು ಭ್ರಷ್ಟಾಚಾರದಿಂದ ರಾಜಕೀಯದ ನೈತಿಕತೆಯೇ ಕಡಿಮೆಯಾಗಿರುವುದರಿಂದ ಸ್ಥಾಪಿತ ರಾಜಕೀಯ ಪಕ್ಷಗಳ ಬಗ್ಗೆ ಒಂದು ರೀತಿಯ ತಾತ್ಸಾರ ಜನತೆಗೆ ಬಂದಿರುವುದು ಸಹಜ, ಆದುದರಿಂದಲೇ ಯಾವುದೇ ರಾಜಕೀಯ ಬೇಡ ಎನ್ನುವುದೂ ಒಂದು ರೀತಿಯಲ್ಲಿ ಸಹಜವೇ. ಆದರೆ ಇತ್ತೀಚಿನ ಚಳುವಳಿಯನ್ನು ಸೂಕ್ಷ್ಮವಾಗಿ ನೋಡಿದರೆ ಕೆಲವು ರಾಜಕೀಯ ವ್ಯಕ್ತಿಗಳು "ರಾಜಕೀಯವೇ ಬೇಡ" ಎಂಬ ವಾದದ ಮೂಲಕ, ಹೊಸ ರಾಜಕೀಯದ ಮೂಲಕ ತಮ್ಮ ರಾಜಕೀಯವನ್ನು ಮುಂದೊಯ್ಯಲು ಪ್ರಯತ್ನಿಸುತ್ತಿರುವರೇ ಎಂಬ ಸಂಶಯ ಕೆಲವರಿಗೆ ಬಂದಿದೆ. ರಾಜ್ಯ ಕಾಂಗ್ರೆಸ್ಸಿನ ಒಳಜಗಳದ ರಾಜಕೀಯವೂ ಕೆಲವು ಕಡೆ ಕೆಲಸಮಾಡಿದೆ ಎಂಬಂತೆಯೂ ಕೆಲವರು ಮಾತನಾಡುತ್ತಲಿದ್ದಾರೆ,

ರಾಜಕೀಯ ಮತ್ತು ರಾಜಕೀಯ ಅಧಿಕಾರವಿಲ್ಲದೆ ತಮ್ಮ ಬೇಡಿಕೆಗಳು ಈಡೇರುವಂತಿಲ್ಲವೆಂದು ಎಲ್ಲರೂ ತಿಳಿದಿರಬೇಕು. ಇಷ್ಟರ ತನಕ ಆಡಳಿತ ನಡೆಸಿದ ರಾಜಕೀಯ ಪಕ್ಷ (ಗಳು) ತಮ್ಮ ಬಗ್ಗೆ ಏನೇನೂ ಮಾಡಿಲ್ಲವಾದರೆ ತಮಗಾಗಿ ಹೋರಾಡುವ ರಾಜಕೀಯಕ್ಕೆ ಮತ್ತು ಪಕ್ಷಕ್ಕೆ ಬೆಂಬಲವೀಯಬೇಕು. ಎಡ ಪ್ರಜಾಪ್ರಭುತ್ವ ಶಕ್ತಿಗಳು ದುರ್ಬಲವಾಗಿರುವ ಕರ್ನಾಟಕ ರಾಜ್ಯದಂತಲ್ಲಿ ಸ್ಥಾಪಿತ ರಾಜಕೀಯ ಪಕ್ಷಗಳೊಡನೆ ಎಡ ಶಕ್ತಿಗಳನ್ನೂ ಜನತೆಯು ತಪ್ಪಾಗಿ ಗುರುತಿಸುವುದು ಸಾಧ್ಯವಿದೆ, ಆದರೆ ಎಡಶಕ್ತಿಗಳೂ ಪ್ರಜಾಪ್ರಭುತ್ವ ಶಕ್ತಿಗಳೂ ಎಷ್ಟೇ ನಿಶ್ಶಕ್ತಿಯಿಂದಿ

[ಕಡೇ ಪುಟ ನೋಡಿ]

ಯಾರ ಸರಕಾರ ಜನತೆಯಿಂದ ದೂರ ಸರಿಯುತ್ತಲಿದೆ?

ಇತ್ತೀಚೆಗೆ ಕಾಮನ್‌ವೆಲ್ತ್ ರಾಷ್ಟ್ರಗಳ ಮುಖಂಡರುಗಳು ಬಂದಿರುವಾಗ ಅವರಲ್ಲೊಬ್ಬರಲ್ಲಿ "ಮಾರ್ಕ್ಸಿಸ್ಟ್ ಪಕ್ಷದ ಸರಕಾರಗಳಿರುವಲ್ಲೆಲ್ಲಾ, ಕಮ್ಯುನಿಸ್ಟರ ಹಿಂಸಾತ್ಮಕ ಕಾರ್ಯಕ್ರಮಗಳಿಂದಲಾಗಿ, ಈ ಸರಕಾರಗಳು ಜನಪ್ರಿಯತೆ ಕಳೆದುಕೊಂಡು ಜನರಿಂದ ದೂರವಾಗುತ್ತಲಿವೆ" ಎಂದು ಶ್ರೀಮತಿ ಇಂದಿರಾಗಾಂಧಿ ಹೇಳಿದರಂತೆ. ಆದರೆ ಅಷ್ಟರಲ್ಲೇ ಕೇರಳ ರಾಜ್ಯದಲ್ಲಿ ನಡೆದ ಮುನಿಸಿಪಾಲಿಟಿ ಮತ್ತು ಪಂಚಾಯತ್ ಉಪಚುನಾವಣೆಗಳು ಶ್ರೀಮತಿ ಇಂದಿರಾಗಾಂಧಿಯವರ ಮಾತು ಎಷ್ಟು ಸುಳ್ಳೆಂದು ತೋರಿಸಿವೆ,

ಕಳೆದ ಕೆಲವು ದಿನಗಳಿಂದ "ನಾನು ಯಾವುದೇ ಪ್ರಜಾಪ್ರಭುತ್ವ ವಿರೋಧಿ ಕ್ರಮ ಅನುಸರಿಸುವುದಿಲ್ಲ; ಪಶ್ಚಿಮ ಬಂಗಾಲದಂತಲ್ಲಿನ ಸರಕಾರವನ್ನು ನಾನು ಉರುಳಿಸುವುದಿಲ್ಲ" ಎಂಬುದಾಗಿ ಶ್ರೀಮತಿ ಇಂದಿರಾಗಾಂಧಿ ಪದೇ ಪದೇ ಹೇಳುತ್ತಿದ್ದಾರೆ, ನಿಜವಾಗಿಯೂ ಇಂದಿರಾಗಾಂಧಿಯವರಿಗೆ ಪ್ರಜಾಪ್ರಭುತ್ವ ಮೌಲ್ಯಗಳಲ್ಲಿ ನಂಬಿಕೆ ಇದ್ದಿದ್ದರೆ, ತಾನು ಸರ್ವಾಧಿಕಾರಿ ಪ್ರವೃತ್ತಿಯನ್ನು ತ್ಯಜಿಸಿದ್ದರೆ, "ಪಶ್ಚಿಮ ಬಂಗಾಲದ ಸರಕಾರವನ್ನು ಉರುಳಿಸುವುದು ಅಥವಾ ಬಿಡುವುದು ಪಶ್ಚಿಮ ಬಂಗಾಲದ ಜನತೆಗೆ ಬಿಟ್ಟದ್ದು" ಎಂಬುದಾಗಿ ಹೇಳಬೇಕಿತ್ತು.

ಕಳೆದ ಲೋಕಸಭಾ ಚುನಾವಣೆಯಿಂದೀಚೆಗೆ ಕುಗ್ಗುತ್ತಾ ಬಂದಿರುವುದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ನೇತೃತ್ವದಲ್ಲಿರುವ ಎಡ ಮತ್ತು ಎಡ ಪ್ರಜಾಪ್ರಭುತ್ವ ಶಕ್ತಿಗಳ ಪ್ರಭಾವವಲ್ಲ; ಬದಲು ಶ್ರೀಮತಿ ಇಂದಿರಾ ಗಾಂಧಿಯವರ ಪಕ್ಷ ಮತ್ತು ಆಕೆಯ ಪ್ರಭಾವ ಕುಗ್ಗುತ್ತಿದೆ, ಅವರ ಪಕ್ಷ ಮತ್ತು ಅವರು ಜನತೆಯಿಂದ ದೂರವಾಗುತ್ತಿರುವುದು ಸ್ಪಷ್ಟ. ಲೋಕಸಭಾ ಚುನಾವಣೆಯಲ್ಲಿ ಬಿದ್ದಷ್ಟು ಶೇಕಡಾವಾರು ಮತ ಇಂದಿರಾ ಕಾಂಗ್ರೆಸ್ಸಿಗೆ ಮತ್ತೆ ನಡೆದ ವಿಧಾನ ಸಭಾ ಚುನಾವಣೆಗಳಲ್ಲಿ ಸಿಗಲಿಲ್ಲ, ಕಾರಣ, ಜನರಿಗೆ ಭ್ರಮನಿರಸನವಾಗಿದ್ದು.

ಮತ್ತೆ ಅಧಿಕಾರ ದೊರೆತ ಮೇಲೆ ಕೊಟ್ಟ ಆಶ್ವಾಸನೆಗಳನ್ನು ಈಡೇರಿಸುವುದರಲ್ಲಿನ ಸಂಪೂರ್ಣ ವೈಫಲ್ಯ, ಪಕ್ಷಾಂತರ ಮತ್ತು ಅಧಿಕಾರಕ್ಕಾಗಿ ತನ್ನ ಪಕ್ಷದೊಳಗೇ ನಡೆಯುತ್ತಿರುವ ತೀವ್ರ ಕಚ್ಚಾಟ ಹಾಗೂ ಮುಖ್ಯಮಂತ್ರಿಗಳನ್ನು ಬದಲಾಯಿಸುವ ಆಟದಿಂದಲಾಗಿ ಕಾಂಗ್ರೆಸ್ ಅಧಿಕಾರದಲ್ಲಿರುವ ಕೆಲವು ರಾಜ್ಯಗಳಲ್ಲಿ ಸರಕಾರವೇ ಇಲ್ಲದಂತಿರುವುದು, ಹೆಚ್ಚುತ್ತಿರುವ ಕೋಮು ಗಲಭೆ ಹಾಗೂ ಇವನ್ನು ತಡೆಗಟ್ಟುವಲ್ಲಿ ಕಾಂಗ್ರೆಸ್ ಸರಕಾರದ ವಿಫಲತೆ–ಇವೆಲ್ಲವುಗಳಿಂದಾಗಿ ಜನತೆ ಕಾಂಗ್ರೆಸ್ಸಿನಿಂದ ದೂರ ಸರಿಯುವುದು

[ಕಡೇ ಪುಟ ನೋಡಿ]

ಮಾರಕಾಸ್ತ್ರಗಳನ್ನು ತಕ್ಷಣ ವಿಸರ್ಜಿಸಿ

ಜಾಗತಿಕ ಶಾಂತಿಸಮ್ಮೇಳನದಲ್ಲಿ ಪಿ. ರಾಮಮೂರ್ತಿ ಕರೆ

ಸರ್ವದೇಶಗಳ ಜಾಗತಿಕ ಶಾಂತಿ ಪಾರ್ಲಿಮೆಂಟ್, ಬಲ್ಗೇರಿಯಾ ದೇಶದ ಸೋಫಿಯಾ ನಗರದಲ್ಲಿ ಸೆಪ್ಟೆಂಬರ್ 23ರಿಂದ 27ರವರೆಗೆ ನಡೆಯಿತು. ಜಾಗತಿಕ ಶಾಂತಿ ಆಂದೋಲನದ 30 ವರ್ಷಗಳ ಇತಿಹಾಸದಲ್ಲಿ ಇದು ದೊಡ್ಡ ಘಟನೆ. 130ಕ್ಕೂ ಹೆಚ್ಚು ದೇಶಗಳಿಂದ 2000ಕ್ಕೂ ಮಿಕ್ಕಿ ಪ್ರತಿನಿಧಿಗಳು ಭಾಗವಹಿಸಿದ್ದರು. ಹಲವಾರು ರಾಜಕೀಯ ಪಕ್ಷಗಳ, ಸಂಯುಕ್ತ ರಾಷ್ಟ್ರ ಸಂಸ್ಥೆಯ, ಕಾರ್ಮಿಕರ, ವಿದ್ಯಾರ್ಥಿಗಳ, ಯುವಕರ, ಮಹಿಳೆಯರ ಹಾಗೂ ಧಾರ್ಮಿಕ, ಕ್ರೀಡಾ ರಂಗಗಳ ಅಂತರಾಷ್ಟ್ರೀಯ ಸಂಘಗಳ ಪ್ರತಿನಿಧಿಗಳು ಭಾಗವಹಿಸಿದ್ದರು. ಉದ್ಘಾಟನಾ ಸಮಾರಂಭದಲ್ಲಿ ಬಲ್ಗೇರಿಯಾದ ಕಮ್ಯುನಿಸ್ಟ್ ಪಕ್ಷದ ಕೇಂದ್ರ ಸಮಿತಿಯ ಪ್ರಥಮ ಕಾರ್ಯದರ್ಶಿ ಹಾಗೂ ಬಲ್ಗೇರಿಯಾದ ಅಧ್ಯಕ್ಷ ಟೋಡೋರ್ ಝಿವ್ಕೋವ್ ಹಾಗೂ ಇತರ ಶಾಂತಿ ಚಳುವಳಿ ನಾಯಕರು ಭಾಗವಹಿಸಿದ್ದರು.

ವಿವಿಧ ವಿಷಯಗಳ ಮೇಲೆ ಅಧಿವೇಶನಗಳು, ಆಯೋಗಗಳು, ಚರ್ಚೆಗಳು ಈ ಪಾರ್ಲಿಮೆಂಟಿನಲ್ಲಿ ನಡೆದವು. ಉದಾ: ಮಧ್ಯ ಏಷ್ಯಾದಲ್ಲಿ ಶಾಂತಿ ಮತ್ತು ನ್ಯಾಯ", "ಲ್ಯಾಟಿನ್ ಅಮೇರಿಕಾ ಹಾಗೂ ಕೆರೇಬಿಯನ್ ಕ್ಷೇತ್ರದಲ್ಲಿ ರಾಷ್ಟ್ರೀಯ ವಿಮೋಚನೆ, ಪ್ರಜಾತಂತ್ರ, ಆರ್ಥಿಕ ಸ್ವಾತಂತ್ರ್ಯಕ್ಕಾಗಿ ಹೋರಾಟಗಳು" ಇತ್ಯಾದಿ,

ಈ ಪಾರ್ಲಿಮೆಂಟಿನ "ಶಸ್ತ್ರಾಸ್ತ್ರ ಸ್ಪರ್ಧೆ ಮತ್ತು ಯುದ್ಧಭೀತಿ ಹಾಗೂ ನಿಶ್ಶಸ್ತ್ರೀಕರಣ ಹಾಗೂ ಒಪ್ಪಂದ (Detente)ದ ಮೇಲೆ ಅವುಗಳ ಪ್ರಭಾವ" ಕುರಿತು ವೇದಿಕೆಯಲ್ಲಿ ಸಿ.ಪಿ.ಐ. (ಎಂ)ನ ಪಾಲಿಟ್ ಬ್ಯೂರೋ ಸದಸ್ಯ ಹಾಗೂ ರಾಜ್ಯಸಭಾ ಸದಸ್ಯರಾದ ಕಾಂ. ಪಿ ರಾಮಮೂರ್ತಿಯವರು ಸೆಪ್ಟೆಂಬರ್ 24ರಂದು ವೇದಿಕೆಯ ಕರಡು ನಿರ್ಣಯದ ಮೇಲೆ ಮಾತನಾಡುತ್ತಾ ಹೀಗೆಂದರು.

"ಈ ಕರಡು ನಿರ್ಣಯದಲ್ಲಿ ಹೇಳಿರುವ ಹೆಚ್ಚಿನ ವಿಷಯಗಳನ್ನು ಅಲ್ಲಗಳೆಯುವಂತಿಲ್ಲ. ನಮ್ಮೆದುರು ಇರುವ ಸಮಸ್ಯೆಯೇನೆಂದರೆ ಅಣ್ವಸ್ತ್ರಗಳಿಂದಾಗುವ ಮಹಾ ವಿನಾಶವನ್ನು ತಡೆಯುವದು ಹೇಗೆ ಎಂಬುದು, ಇದಕ್ಕೆ ನಾವು ಶಾಂತಿ ಹಾಗೂ ನಿಶ್ಶಸ್ತ್ರೀಕರಣಕ್ಕಾಗಿ ನಡೆದ ಚಳುವಳಿಗಳಿಂದ ಪಾಠ ಕಲಿಯಬೇಕು. ಈ ಚಳುವಳಿ ಪ್ರಥಮ ಜಾಗತಿಕ ಯುದ್ಧದ ಮೊದಲೇ ಆರಂಭವಾಗಿತ್ತು. ಆ ಯುದ್ಧದ ನಂತರ ನಡೆದ ಪ್ರಥಮ ನಿಶ್ಶಸ್ತ್ರೀಕರಣ ಸಮ್ಮೇಳನದಲ್ಲಿ ಸಂಪೂರ್ಣ ನಿಶ್ಶಸ್ತ್ರೀಕರಣದ ಸಲಹೆ ಮಂಡಿಸಿದ ದೇಶವೆಂದರೆ ಅದೇ ತಾನೇ ಹುಟ್ಟಿದ ಜಗತ್ತಿನ ಮೊದಲ ಸಮಾಜವಾದೀ ದೇಶವಾದ ಸೋವಿಯೆತ್ ಯೂನಿಯನ್ ಎಂಬುದು ಗಮನಾರ್ಹ. ಎರಡನೇ ಜಾಗತಿಕ ಯುದ್ಧದ ಕೊನೆಯಲ್ಲಿ ಹಿರೋಶಿಮಾ, ನಾಗಸಾಕಿಯ ಮೇಲೆ ಬಾಂಬು ಹಾಕಿದ ದೇಶ ಅಮೇರಿಕೆಯ ಸಂಯುಕ್ತ ಸಂಸ್ಥಾನ. ಈ ಯುದ್ಧದ ನಂತರ ಹುಟ್ಟಿಕೊಂಡ ಸಮಾಜವಾದೀ ದೇಶಗಳು ಹಾಗೂ ರಾಷ್ಟ್ರೀಯ ವಿಮೋಚನಾ ಚಳುವಳಿಯಿಂದ ವಸಾಹತುವಾದ ಕೊನೆ ಸಮೀಪಿಸುತ್ತಿದ್ದುದರಿಂದ ಭಯಗೊಂಡ ಚರ್ಚಿಲ್ ಸಮಾಜವಾದೀ ರಾಷ್ಟ್ರಗಳ ಮೇಲೆ ಬಾಂಬುಗಳ ಮಳೆಸುರಿಸಬೇಕೆಂದು ಅಮೇರಿಕೆಗೆ ಕರೆಕೊಟ್ಟಿದ್ದನ್ನು ಇಲ್ಲಿ ಜ್ಞಾಪಿಸಿಕೊಳ್ಳೋಣ. ನಂತರ ಸೋವಿಯೆತ್ ಯೂನಿಯನ್ ಅಣ್ವಸ್ತ್ರಗಳ ಕ್ಷೇತ್ರದಲ್ಲಿ ಅಮೇರಿಕೆಯ ಗುತ್ತೇದಾರಿಕೆಯನ್ನು ಮುರಿದಾಗ ಬಾಂಬನ್ನು ಪ್ರಯೋಗಿಸುವಲ್ಲಿ ಸೋವಿಯೆತ್ ಯೂನಿಯನ್ ಮೊದಲ ದೇಶವಾಗುವುದಿಲ್ಲ ಎಂದು ಸ್ಟಾಲಿನ್ ಘೋಷಿಸಿದರು. ಅಲ್ಲದೇ ಅಣ್ವಸ್ತ್ರಗಳ ಸಂಗ್ರಹವನ್ನು ಸಂಪೂರ್ಣವಾಗಿ ನಾಶ ಮಾಡುವಂತೆ ಅವರು ಕರೆಕೊಟ್ಟರು.

ನಿಶ್ಶಸ್ತ್ರೀಕರಣದ ಘನ ಉದ್ದೇಶಕ್ಕಾಗಿ ಚಳುವಳಿ ಬಲಗೊಳ್ಳುತ್ತಾ

[ಕಡೇ ಪುಟ ನೋಡಿ]

ಪೋಲೀಸ್ ನೀತಿಯ ವಿರುದ್ಧ ಪ್ರತಿಭಟನೆ

ಬೆಂಗಳೂರು ಐ.ಟಿ.ಸಿ. ಆಡಳಿತ ವರ್ಗ ಸುಮಾರು 160 ಕಾರ್ಮಿಕರನ್ನು ಅಮಾನತ್ತುಗಳಿಸಿರುವ ಬಗ್ಗೆ ಮತ್ತು 16 ಕಾರ್ಮಿಕರನ್ನು ಅಕ್ರಮವಾಗಿ ವಜಾಮಾಡಿರುವ ವಿರುದ್ಧ ಮತ್ತು ಸಂಘವನ್ನು ಮಾನ್ಯತೆ ಮಾಡಬೇಕು ಎಂದು ಕಾರ್ಮಿಕರು ಶಾಂತಿಯುತ ಧರಣಿಯನ್ನು ಮಾಡುತ್ತಿದ್ದರೆ ಅವರ ನ್ಯಾಯಯುತ ಹೋರಾಟವನ್ನು ಮುರಿಯಲು ಪೋಲೀಸ್ ಕಮೀಷನರ್‌ರವರು ಐ.ಟಿ.ಸಿ. ಕಾರ್ಖಾನೆಯ ಸುತ್ತ ಮುತ್ತ 2 ಕಿ.ಮೀ. ದೂರ 35ನೇ ಸೆಕ್ಷನ್ ಘೋಷಿಸಿರುತ್ತಾರೆ. ಯಾವ ಅಹಿತಕರ ಘಟನೆ ನಡೆಯದಿದ್ದರೂ ಕೂಡ ಕಾರ್ಮಿಕರ ಪ್ರಜಾಪ್ರಭುತ್ವ ಹಕ್ಕುಗಳನ್ನು ಮೊಟಕು ಮಾಡಲು ಈ ರೀತಿ ಸೆಕ್ಷನ್ 35ಅನ್ನು ಘೋಷಿಸಿರುವುದು ಪೋಲೀಸರ ವರ್ತನೆ ಹದ್ದು ಮೀರಿ ವರ್ತಿಸುತ್ತಾ ಇರುವುದು ಕಂಡುಬರುತ್ತಿದೆ. ಈ ಕಾರ್ಮಿಕ ವಿರೋಧಿ ನೀತಿಯನ್ನು ಖಂಡಿಸಲು ಹಾಗೂ ಐ.ಟಿ.ಸಿ. ಕಾರ್ಮಿಕರಿಗೆ ಬೆಂಬಲ ನೀಡಲು ಬೆಂಗಳೂರು ಜಿಲ್ಲಾ ಸಿ.ಐ.ಟಿ.ಯು. ವಿನಿಂದ ದಿನಾಂಕ 6-10-80ರಂದು ಕಾರ್ಮಿಕರ ಮೆರವಣಿಗೆಯನ್ನೇರ್ಪಡಿಸಿ ಪೋಲೀಸ್ ಕಮೀಷನರ್‌ರವರನ್ನು ಕಂಡು ಮನವಿ ಪತ್ರ ಅರ್ಪಿಸಲಾಯಿತು.

ಪೋಲೀಸ್ ಕಮೀಷನರ್ ಗರುಡಾಚಾರ್‌ರೊಡನೆ ಕಾಂ. ಟಿ. ಎಸ್. ಅನಂತರಾಂ, ಕಾಂ. ಶ್ರೀನಿವಾಸ್, ಕಾಂ.ಪಿ.ಕೆ. ಸುಬ್ರಮಣಿ ಹಾಗೂ ಐ.ಟಿ.ಸಿ. ಕಾರ್ಮಿಕ ಮುಖಂಡರು ಮಾತನಾಡಿ ವಿನಾಕಾರಣ 35ನೇ ಸೆಕ್ಷನ್ ಜಾರಿಮಾಡಿ ಕಾರ್ಮಿಕರ ನ್ಯಾಯಯುತ ಹೋರಾಟಗಳನ್ನು ದಮನ ಮಾಡುತ್ತಿರುವುದು ಸರಿ ಅಲ್ಲ ಎಂದು ತಿಳಿಸಿದರು.

ಪೋಲೀಸ್ ಕಮೀಷನರ್ ರವರು ಇದರ ಬಗ್ಗೆ ಪರಿಶೀಲಿಸುವುದಾಗಿ ಭರವಸೆ ಇತ್ತರು.

○

ಗುಲಬರ್ಗದಲ್ಲಿ ಯುವಜನ ಸಂಘಟನೆ

ದಿನಾಂಕ 30-9-1980ರಂದು ಸಾಯಂಕಾಲ 5-30 ಘಂಟೆಗೆ ಕಲಬುರ್ಗಿಯಲ್ಲಿ ಪ್ರಜಾಸತ್ತಾತ್ಮಕ ಯುವಜನ ಸಂಘಟನೆಯ ಸಭೆಯು ಕಾಂ. ಆರ್. ಕೆ. ಹುಡುಗಿಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಹೈದರಾಬಾದ್ ಕರ್ನಾಟಕದ ಸಂಚಾಲಕ ಕಾಂ. ಬಾಣಿ ಸುಭಾಷ್ಚಂದ್ರ ಇವರು ಸಂಘಟನೆಯ ಧ್ಯೇಯ ಧೋರಣೆಯನ್ನು ಸಭೆಗೆ ವಿವರಿಸಿದರು. ರಾಜ್ಯ ಸಮಿತಿಯ ಮುಖ್ಯ ಸಂಚಾಲಕ ಕಾಂ. ಜಿ.ವಿ. ಶ್ರೀರಾಮರೆಡ್ಡಿ "ಯುವಜನತೆ ಹಾಗು ರಾಷ್ಟ್ರೀಯ ಸಮಸ್ಯೆಗಳು" ಎಂಬ ವಿಷಯದ ಕುರಿತು ಮಾತನಾಡಿದಲ್ಲದೆ ಯುವಕರು ಇಂಥ ಸಂಘಟನೆಯಲ್ಲಿ ಸೇರುವುದರ ಮಹತ್ವವನ್ನು ವಿವರಿಸಿದರು ಕಾಂ ಜೆ. ಅಗಪ್ಪನ್ ಕಲಬುರ್ಗಿ ಶಾಖೆಯ ಕಾರ್ಯದರ್ಶಿ ಅತಿಥಿಗಳ ಪರಿಚಯ ಮಾಡಿಸಿದರು. ಕ್ರಾಂತಿ ಗೀತೆಯೊಂದಿಗೆ ಪ್ರಾರಂಭವಾದ ಈ ಸಭೆಯಲ್ಲಿ ಕಾಂ. ಅಶೋಕ ಚಾಂದಕೋಟೆ ಈ ಸಂಘಟನೆಯ ಅಧ್ಯಕ್ಷರು ಸ್ವಾಗತ ಕೋರಿದರು ಆಮೇಲೆ ಕಾಂ. ಪಿ.ಎಸ್. ಹಿರೇಮಠ ಕಲಬುರ್ಗಿ ಶಾಖೆಯ ಉಪಾಧ್ಯಕ್ಷರು ವಂದನಾರ್ಪಣೆ ಮಾಡಿದರು.

●

ಎಸ್. ಎಫ್. ಐ. ಮುಖಂಡರ ಮಾಸ್ಕೋ ಪ್ರಯಾಣ

'ಯುವಜನರ ಪಾತ್ರ' ಎಂಬ ವಿಷಯದ ಕುರಿತು ಸೋವಿಯತ್ ರಷ್ಯಾದ ಮಾಸ್ಕೋದಲ್ಲಿ ನಡೆಯಲಿರುವ ವಿಚಾರ ಸಂಕಿರಣದಲ್ಲಿ ಎಸ್.ಎಫ್.ಐ. ಪ್ರಧಾನ ಕಾರ್ಯದರ್ಶಿ ಕಾಂ. ನೇಪಾಲ್‌ದೇವ ಭಟ್ಟಾಚಾರ್ಯ ಮತ್ತು 'ಸ್ಟೂಡೆಂಟ್ಸ್ ಸ್ಟ್ರಗಲ್' ಸಂಪಾದಕರು ಹಾಗೂ ಎಸ್.ಎಫ್.ಐ. ಸಹಕಾರ್ಯದರ್ಶಿ ಕಾಂ. ಸೀತಾರಾಮ್ ಯಚೂರಿಯವರು ಭಾಗವಹಿಸಲಿದ್ದಾರೆ.

○

ಶಿಕ್ಷಕೇತರರಿಂದ ಸಾಮೂಹಿಕ ರಜಾ

ಕರ್ನಾಟಕ ರಾಜ್ಯದ ಖಾಸಗಿ ಕಾಲೇಜುಗಳ ಶಿಕ್ಷಕೇತರರ ಸಂಘದ ಕರೆಯ ಮೇರೆಗೆ, ಗ್ರ್ಯಾಚುಟಿ, ಕುಟುಂಬ ಕಲ್ಯಾಣನಿಧಿ ಸೌಲಭ್ಯ, ಗೃಹಖರೀದಿ ಸೌಲಭ್ಯ, ಔಷಧಿಗಳ ಖರ್ಚು, ಮನೆ ಬಾಡಿಗೆ ಭತ್ಯ-4ನೇ ದರ್ಜೆನೌಕರರಿಗೆ ಸಮವಸ್ತ್ರ ಮೊದಲಾದ ಬೇಡಿಕೆಗಳನ್ನು ಜಾರಿಗೆ ತರುವಂತೆ ಒತ್ತಾಯಿಸಲು 29.9.80ರಂದು ತಿಪಟೂರು ಕಲ್ಪತರು ಕಾಲೇಜಿನ ಶಿಕ್ಷಕೇತರರು ಸಾಮೂಹಿಕ ರಜಾ ದಿನವನ್ನು ಯಶಸ್ವಿಯಾಗಿ ಆಚರಿಸಿದರು. ●

ಸೌಹಾರ್ದ ಪ್ರತಿಭಟನಾ ಪ್ರದರ್ಶನ

ಮೆಟಲ್ ಲ್ಯಾಂಪ್ಸ್‌ಕ್ಯಾಪ್ಸ್ ಕಾರ್ಮಿಕರ ಮತ್ತು ಐ.ಟಿ.ಐ. ಅನ್ಸಿಲರಿ ಪಿ.ಟಿ.ಪಿ ಕಾರ್ಮಿಕರ ದೀರ್ಘಕಾಲದ ಹೋರಾಟಕ್ಕೂ, ಐ.ಟಿ.ಸಿ. ಕಾರ್ಮಿಕರ ಮೇಲೆ ಆಡಳಿತ ವರ್ಗ ನಡೆಸುತ್ತಿರುವ ದಬ್ಬಾಳಿಕೆಯ ವಿರುದ್ಧವಾಗಿ, ಬೆಂಗಳೂರು ಜಿಲ್ಲಾ ಸಿ.ಐ.ಟಿ.ಯು. ಈ ಕಾರ್ಮಿಕರಿಗೆ ಬೆಂಬಲವಾಗಿ ತಾರೀಖು 30-9-80ರಂದು ಸಂಜೆ ಓಲ್ಡ್ ಮದರಾಸ್ ರಸ್ತೆಯಿಂದ ಸಿ.ಐ.ಟಿ.ಯು. ಸಂಘಗಳ ಕಾರ್ಮಿಕರ ಮೆರವಣಿಗೆಯನ್ನು ಇಂದಿರಾನಗರದಲ್ಲಿರುವ ಪಿ. ಟಿ. ಪಿ ಮಾಲೀಕರ ನಿವಾಸದ ಮುಂದೆ ಹೋಗಿ ಅವರ ಕಾರ್ಮಿಕ ವಿರೋಧಿ ನೀತಿಯ ವಿರುದ್ಧ ಕೂಗಿ ಸ್ವಲ್ಪ ಕಾಲ ಪ್ರದರ್ಶನ ನಡೆಸಿದ ನಂತರ ಮೆಟಲ್ ಲ್ಯಾಂಪ್ಸ್ ಕ್ಯಾಪ್ಸ್ ಮಾಲೀಕರ ನಿವಾಸಕ್ಕೆ ಹೋಗಿ ಮಾಲೀಕರ ಹಟಮಾರಿತನ ಧೋರಣೆಯನ್ನು ವಿರೋಧಿಸಿ ಘೋಷಣೆಗಳನ್ನು ಕೂಗಿ ಪ್ರತಿಭಟಿಸಲಾಯಿತು.

○

ಯುವಜನ ಸಂಘಟನೆ ಕಾರ್ಯಕ್ರಮಗಳು

ಕುಂದಾಪುರ :

ಕರ್ನಾಟಕ ಪ್ರಜಾಸತ್ತಾತ್ಮಕ ಯುವಜನ ಸಂಘಟನೆಯು ಕೊಟ್ಟ ಕರೆಯ ಮೇರೆಗೆ 6-10-80 ರಂದು ಕುಂದಾಪುರ ಯುವಜನ ಸಂಘಟನೆ ತಾಲ್ಲೂಕು ಸಮಿತಿ ನೇತೃತ್ವದಲ್ಲಿ ನಿರುದ್ಯೋಗಿಗಳ ಪ್ರದರ್ಶನ ನಡೆಯಿತು. ಉದ್ಯೋಗ ವಿನಿಮಯ ಕಚೇರಿಗೆ ತೆರಳಿದ ನಿರುದ್ಯೋಗಿಗಳು ಅನೇಕ ಬೇಡಿಕೆಗಳನ್ನು ಘೋಷಣೆಗಳ ಮೂಲಕ ವ್ಯಕ್ತಪಡಿಸಿದರು. ನಿರುದ್ಯೋಗಿಗಳಿಗೆ ಉದ್ಯೋಗ, ಉದ್ಯೋಗ ದೊರಕುವವರೆಗೆ ನಿರುದ್ಯೋಗ ಭತ್ತೆ, ಸ್ಟೈಪೆಂಡರಿ ಯೋಜನೆಯನ್ವಯ ಉದ್ಯೋಗ ಪಡೆದವರನ್ನು ಖಾಯಂಗೊಳಿಸುವುದು, ಅವರ ಮಾಸಿಕ ವೇತನವನ್ನು 300ರೂ.ಗಳಿಗೆ ಏರಿಸುವುದು, ಉದ್ಯೋಗ ವಿನಿಮಯ ಕೇಂದ್ರದ ಭ್ರಷ್ಟಾಚಾರ ನಿಲ್ಲಿಸುವುದು ಸರಕಾರಿ ಇಲಾಖೆಗಳಲ್ಲಿ ಕನ್ನಡ ಬಳಕೆ, ಕನ್ನಡ ಶೀಘ್ರಲಿಪಿ ಮತ್ತು ಬೆರಳಚ್ಚುಗಾರರಿಗೆ ಕೂಡಲೇ ಉದ್ಯೋಗ ಮುಂತಾದುವು ಅವರ ಬೇಡಿಕೆಗಳಾಗಿದ್ದವು ಈ ಕಾರ್ಯಕ್ರಮದ ನೇತೃತ್ವವನ್ನು ಕಾಂ. ಕೆ. ಆನಂದ ಭಂಡಾರಿ (ಮಲೆನಾಡು ವಿಭಾಗ ಸಂಚಾಲಕ) ಕಾಂ. ಮಹಾಬಲ ದೇವಾಡಿಗ (ಕಾರ್ಯದರ್ಶಿ) ಕಾಂ. ಕೆ ಶಂಕರ ಖಾರ್ವಿ (ಉಪಾಧ್ಯಕ್ಷ) ಇವರು ವಹಿಸಿದ್ದರು. ಸ್ಥಳೀಯ ಎಸ್. ಎಫ್. ಐ. ಸದಸ್ಯರು ಇದಕ್ಕೆ ಬೆಂಬಲ, ಸಹಕಾರ ನೀಡಿದ್ದರು.

ದಾಂಡೇಲಿ :

ದಾಂಡೇಲಿಯ ಉದ್ಯೋಗ ವಿನಿಮಯ ಕಚೇರಿಯ ಎದುರು ಪ್ರಜಾಸತ್ತಾತ್ಮಕ ಯುವಜನ ಸಂಘಟನೆಯ ದಾಂಡೇಲಿ ಶಾಖೆಯ ವತಿಯಿಂದ ಧರಣಿ ಮುಷ್ಕರ ನಡೆಯಿತು. ಯುವಕರು ಮೆರವಣಿಗೆಯಲ್ಲಿ ತೆರಳಿ, ಭಿತ್ತಿಪತ್ರ, ಘೋಷಣೆಗಳೊಂದಿಗೆ ಉದ್ಯೋಗ ವಿನಿಮಯ ಕಚೇರಿಗೆ ಬಂದರು. ಅಲ್ಲಿ ಸಭೆ ಸೇರಿಸಿ, ಬೇಡಿಕೆಗಳನ್ನು ಓದಿ ಹೇಳಲಾಯಿತು. ಬೇಡಿಕೆಗಳ ಮನವಿಯನ್ನು ಕಚೇರಿಯ ಮುಖ್ಯಾಧಿಕಾರಿಗಳಿಗೆ ಸಲ್ಲಿಸಲಾಯಿತು. ನಂತರ ಕಾಮ್ರೇಡುಗಳಾದ ಉಮೇಶ ಪಿ. ನಾಯ್ಕ, ಭಾಸ್ಕರ ನಾಯ್ಕ, ಕರಿಯಪ್ಪ ಕಟ್ಟಿಮನಿ, ಎಂ. ಜೆ. ಜನ್ನ, ವಿನೋದ ಗಾವಡೆ, ವಿನಾಯಕ ಕಾಂಬಳೆ, ಟಿ. ಎಸ್ ನಾಯ್ಕ, ಆರ್. ಎ. ಖಾನ್ ಮೊದಲಾದವರು ಧರಣಿಕೂತರು, ಸಂಜೆ ನಡೆದ ಸಭೆಯಲ್ಲಿ ಕಾಂ. ಜಿ. ಎ. ಪವಾರ ಮತ್ತಿತರರು ಮಾತನಾಡಿದರು.

●

ಕಾಂ. ಎ. ಕೆ. ಯವರಿಗೆ ಶ್ರದ್ಧಾಂಜಲಿ

ಮಂಗಳೂರು :

ಸಿ.ಪಿ.ಐ (ಎಂ) ದಕ್ಷಿಣ ಕನ್ನಡ ಜಿಲ್ಲಾ ಸಮಿತಿಯ ಸೆಕ್ರಿಟಾರಿಯೆಟ್ ಸಭೆ ಸೇರಿ ದಿನಾಂಕ 17-9-80ರಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ದ.ಕ. ಜಿಲ್ಲೆಯ ಹಿರಿಯ ಮುಂದಾಳು ಕಾಂ. ಎ ಕೆ. ಯವರಿಗೆ ಶ್ರದ್ಧಾಂಜಲಿ ಅರ್ಪಿಸಲಾಯಿತು.

ಕುಂದಾಪುರ :

ದ.ಕ. ಜಿಲ್ಲೆಯ ಕುಂದಾಪುರದಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ತಾಲ್ಲೂಕು ಸಮಿತಿಯ ಸಭೆ ಸೇರಿ ಕಾಂ. ಎ.ಕೆ. ನಾರಾಯಣರ ನಿಧನದ ನಿಮಿತ್ತ ಸಂತಾಪ ಸೂಚಿಸಲಾಯಿತು.

ಭದ್ರಾವತಿ :

ದಿನಾಂಕ 22-9-80 ರಂದು ಭದ್ರಾವತಿಯ ಮಾರ್ಕ್ಸ್‌ವಾದಿ ಪಕ್ಷದ ಕಛೇರಿಯಲ್ಲಿ ಉಭಯ ಕಮ್ಯುನಿಸ್ಟ್ ಪಕ್ಷದ ಕಾರ್ಯಕರ್ತರು ಸಭೆ ಸೇರಿ ದ.ಕ.ಜಿಲ್ಲೆಯ ಕಾರ್ಮಿಕ ಚಳುವಳಿಯ ಸ್ಥಾಪಕ ಮುಂದಾಳುಗಳಲ್ಲೊಬ್ಬರಾದ ಕಾಂ. ಎ.ಕೆ. ನಾರಾಯಣರವರ ನಿಧನಕ್ಕೆ ಸಂತಾಪ ಸೂಚಿಸಿದರು.

ಮಂಗಳೂರು :

ದಿನಾಂಕ 17-9-80ರಂದು ಎಸ್. ಕೆ. ಪ್ರೆಸ್ ವರ್ಕರ್ಸ್ ಯೂನಿಯನ್ ಕಾರ್ಯಕಾರಿ ಸಮಿತಿ ಸಭೆ ಸೇರಿ ಕಾಂ. ಎ.ಕೆ.ಯವರಿಗೆ ಶ್ರದ್ಧಾಂಜಲಿ ಅರ್ಪಿಸಿತು.

ಹೊಸಪೇಟೆಯಲ್ಲಿ ಎಸ್. ಎಫ್. ಐ.

ದಿನಾಂಕ 5-10-80 ರಂದು ಹೊಸಪೇಟೆ ತಾಲ್ಲೂಕು ಮಟ್ಟದ 'ಭಾರತ ವಿದ್ಯಾರ್ಥಿ ಫೆಡರೇಷನ್' (ಎಸ್.ಎಫ್.ಐ.) ತಾತ್ಕಾಲಿಕ ಸಮಿತಿಯನ್ನು ರಚಿಸಲಾಯ್ತು. ಸಂಚಾಲಕರಾಗಿ ಹುಸೇನ್ ಸಾಹೇಬ್, ಉಪಸಂಚಾಲಕರಾಗಿ ಟಿ ವೆಂಕಟೇಶ್ ಮತ್ತು ಸಮಿತಿಯ ಸದಸ್ಯರಾಗಿ ಚಿದಾನಂದ್, ಅಂಬಿಕಾ, ಪದ್ಮಾವತಿ, ಶಾಂತಕುಮಾರಿ, ವೀರಣ್ಣ, ಎಸ್. ವೆಂಕಟೇಶ್, ನಜೀರ್ ಅಹ್ಮದ್, ಅಶೋಕ್ ಕುಮಾರ್, ಶೇಷಗಿರಿರಾವ್, ಮತ್ತು ಗಿರಿಧರರಾವ್ ಹವಲ್ದಾರ್ ಇವರು ಆಯ್ಕೆಗೊಂಡರು.

ಈ ಸಂದರ್ಭದಲ್ಲಿ ಮಾತನಾಡಿದ ಪದಾಧಿಕಾರಿಗಳು, ವಿದ್ಯಾರ್ಥಿಗಳು ಮತ್ತು ಸಮಾಜಕ್ಕಿರುವ ನಿಕಟ ಸಂಬಂಧದ ಬಗ್ಗೆ ತಿಳಿಸಿ, ವಿದ್ಯಾರ್ಥಿಗಳು ರಾಜಕೀಯದಲ್ಲಿ ಭಾಗವಹಿಸುವುದು ಬೇಡ ಎನ್ನುವ ಪ್ರತಿಗಾಮಿ ಬುದ್ಧಿಗಾಮಿ ಬುದ್ಧಿಜೀವಿಗಳ ಮಾತನ್ನು ಅಲ್ಲಗಳೆದರು.

ಈ ಸಭೆಯಲ್ಲಿ 'ಎಸ್.ಎಫ್.ಐ.' ಜಿಲ್ಲಾ ಸಂಘಟಕರಾದ ಮ. ಜಂಬಯ್ಯ ನಾಯಕ, ಮತ್ತು 'ಡಿ.ಎಸ್.ಎಸ್.' ಸಂಚಾಲಕರಾದ ಹುಲುಗಪ್ಪ ಗುಜ್ಜಲ್ ಇವರುಗಳು ಉಪಸ್ಥಿತರಿದ್ದರು.

●

ಪ್ಲೈವುಡ್ ಕಾರ್ಮಿಕರ ಬೇಡಿಕೆ

ಸೌತ್ ಕೆನರಾ ಡಿಸ್ಟ್ರಿಕ್ಟ್ ಪ್ಲೈವುಡ್ ವರ್ಕರ್ಸ್ ಯೂನಿಯನ್‌ನ ಕಾರ್ಯಕಾರಿ ಸಮಿತಿ ಸಭೆಯು 5-10-80ರಂದು ಕಾಂ. ಕೆ. ಮೂಸಬ್ಬ ಅವರ ಅಧ್ಯಕ್ಷತೆಯಲ್ಲಿ ನಡೆಯಿತು.

ಪ್ರಾರಂಭದಲ್ಲಿ ಕಾಂ. ಎ ಕೆ. ನಾರಾಯಣ ಅವರ ನಿಧನಕ್ಕೆ ಸಂತಾಪ ವ್ಯಕ್ತಪಡಿಸಲಾಯಿತು. 1980ರ ಬೋನಸ್ ಬಗ್ಗೆ ಚರ್ಚಿಸಿ, ಆ ಬಗ್ಗೆ ಶೀಘ್ರಕ್ರಮ ಕೈಗೊಳ್ಳುವಂತೆ ಮಾಲೀಕರನ್ನು ಒತ್ತಾಯಿಸಲು ನಿರ್ಧರಿಸಲಾಯಿತು. ರಾಜ್ಯ ವಿಮಾ ಯೋಜನೆ ಸೌಲಭ್ಯ ಪ್ಲೈವುಡ್ ಕಾರ್ಮಿಕರಿಗೂ ಸಿಗುವಂತೆ ಸಂಬಂಧಪಟ್ಟ ಅಧಿಕಾರಿಗಳನ್ನು ಒತ್ತಾಯಿಸುವ ನಿರ್ಣಯವನ್ನೂ ಸಭೆ ಅಂಗೀಕರಿಸಿತು.

○

ಐಕ್ಯರಂಗಕ್ಕೆ

ಚಂದಾದಾರರಾಗಿರಿ

ಆರ್ಥಿಕ ಸಮೀಕ್ಷೆ :

ಆರ್. ಚಂದ್ರ.

ದೇಶದಾದ್ಯಂತ ಸಕ್ಕರೆ ಅಭಾವ. ಪಡಿತರ ಅಂಗಡಿಗಳಲ್ಲಿ ಸಕ್ಕರೆಗಾಗಿ ಭಾರಿ ಕ್ಯೂ. ಆದರೂ, ಸಮಯಕ್ಕೆ ಸರಿಯಾಗಿ ಸಾಕಷ್ಟು ಪ್ರಮಾಣದಲ್ಲಿ ಸಕ್ಕರೆ ಸಿಗುತ್ತಿಲ್ಲ. ಮುಕ್ತ ಮಾರುಕಟ್ಟೆಯಿಂದ ಸಕ್ಕರೆ ಕಣ್ಮರೆಯಾಗುತ್ತಿದೆ. ಕಾಳಸಂತೆಯಲ್ಲಿ ಕೆ.ಜಿ.ಗೆ ರೂ. ೧೦ ರಿಂದ ರೂ. ೨೦ರವರೆಗೆ ಬೆಲೆ ಕೊಟ್ಟರೆ ಮಾತ್ರ ಸಕ್ಕರೆ ಸಿಗಬಹುದು! ಮುಂದಿನ ಎರಡು ತಿಂಗಳುಗಳು ಹಬ್ಬದ ದಿನಗಳು,ಸಕ್ಕರೆಯ ಬೇಡಿಕೆ ಇನ್ನಷ್ಟೂ ಹೆಚ್ಚು. ಹೊಸ ಸಕ್ಕರೆ ಮಾರುಕಟ್ಟೆಗೆ ಬರಲು ಇನ್ನೂ ಎರಡು ತಿಂಗಳುಬೇಕು. ಸಕ್ಕರೆ ಅಭಾವದಿಂದ, ಬೆಲೆ ಏರಿಕೆಯಿಂದ ಜನರಲ್ಲಿ ಹಾಹಾಕಾರ ಎದ್ದಿದೆ.

ಸಕ್ಕರೆ ಹೆಚ್ಚು ತಿಂದರೆ ಸಿಹಿ ಮೂತ್ರ ರೋಗ ಬರುತ್ತದೆ. ಸಕ್ಕರೆ ಬೆಲೆ ಹೆಚ್ಚಿದರೆ ಬಡಜನರಿಗೆ ತೊಂದರೆ ಇಲ್ಲ ನಿಯಮಿತ ಪ್ರಮಾಣದಲ್ಲಿ ಸಕ್ಕರೆ ಪಡಿತರ ಅಂಗಡಿಗಳಲ್ಲಿ ಕಡಿಮೆ ಬೆಲೆಗೆ ಸಿಗುತ್ತದೆ. ಹೆಚ್ಚು ಸಕ್ಕರೆ ಬೇಕಾದವರು ಹೆಚ್ಚು ಬೆಲೆ ಕೊಟ್ಟು ಪಡೆಯಿರಿ ಎಂದು ಇಂದಿರಾ ಕಾಂಗ್ರೆಸ್ ನ ಮಂತ್ರಿಗಳು, ಪುಢಾರಿಗಳು ಕಂಗೆಟ್ಟ ಜನರಿಗೆ ಉಪದೇಶ ಹೇಳುತ್ತಿದ್ದಾರೆ ! 'ಬೆಲೆ ಇಳಿಸುತ್ತೇವೆ' ಎಂಬ ಆಶ್ವಾಸನೆಯಿಂದ ಇವರು ಕೆಲವೇ ತಿಂಗಳುಗಳ ಹಿಂದೆ ಕೇಂದ್ರದಲ್ಲಿಯೂ ಹೆಚ್ಚಿನ ರಾಜ್ಯಗಳಲ್ಲಿಯೂ ಅಧಿಕಾರಕ್ಕೆ ಬಂದಿರುವುದು ಎಲ್ಲರಿಗೂ ನೆನಪಿದೆ ಅಧಿಕಾರಕ್ಕೆ ಬಂದ ಮೇಲೆ ಬೆಲೆಗಳು ನಾಗಾಲೋಟದಲ್ಲಿ ಏರುತ್ತಿರುವಾಗ, ಜೀವನಾವಶ್ಯಕ ವಸ್ತುಗಳು ಜನಸಾಮಾನ್ಯರ ಗ್ರಾಹಕ ಶಕ್ತಿಗೆ ಎಟಕುತ್ತಿರುವುದನ್ನು ಗಮನಿಸುವುದಿಲ್ಲವೇಕೆ? ಸಕ್ಕರೆಯ ಅಭಾವದಿಂದ ರೈಲ್ವೆ ಪ್ರಯಾಣಕರಿಗೆ ಬೆಲ್ಲದ ಟೀ-ಕಾಫಿಯೇ ಗತಿಯಾಗಿದೆ. ಹೋಟೇಲುಗಳ ಟೀ-ಕಾಫಿಯ ಮತ್ತು ಇತರ ಪಾನೀಯಗಳ, ಸಿಹಿತಿಂಡಿಗಳ ಬೆಲೆಗಳು ವಿಪರೀತ ಏರಿವೆ. ಸಕ್ಕರೆಯ ಅಭಾವದಿಂದಾಗಿ ಬ್ರೆಡ್, ಬಿಸ್ಕತ್, ಪಾನೀಯ, ಔಷಧಿಗಳ ಬೆಲೆಗಳೂ ವಿಪರೀತ ಏರಿವೆ. ಸಕ್ಕರೆ ಬೆಲೆಏರಿಕೆಯಿಂದ ಬೆಲ್ಲ, ಖಂಡಸಾರಿ ಬೆಲೆಗಳೂ ಏರುತ್ತಿವೆ.

ಸಕ್ಕರೆಯು ಜನಸಾಮಾನ್ಯರ ಅತ್ಯವಶ್ಯಕ ವಸ್ತುಗಳಲ್ಲಿ ಒಂದು. ಅದು ಕೇವಲ ಸಿಹಿತಿಂಡಿಗಳಿಗಾಗಿ ಬಳಸುವ ಭೋಗವಸ್ತು ಎಂದು ಪ್ರಚಾರ ಮಾಡುವವರು ಅನಾಗರಿಕರು ಅಥವಾ ರಾಜಕೀಯ ದುರುದ್ದೇಶವುಳ್ಳವರು,

1-9-80ರಿಂದ ಜಾರಿಗೆ ಬಂದ ಹೊಸ ಸಕ್ಕರೆಯ ಧೋರಣೆಯೇ ಸದ್ಯದ ದುಃಸ್ಥಿತಿಗೆ ಕಾರಣ. ಆಗೋಸ್ಟ್ ತಿಂಗಳವರೆಗೆ ಸಕ್ಕರೆ ಮಾರಾಟ ಎರಡು ದರಗಳಲ್ಲಿ ನಡೆಯುತ್ತಿತ್ತು.

ಮೂಲಕ ನಿಯಮಿತ ಪ್ರಮಾಣದಲ್ಲಿ ಕೆ. ಜಿ ಗೆ ರೂ. 2-85ರ ದರದಲ್ಲಿ ವಿತರಣೆಯಾಗುತ್ತಿತ್ತು.

2. ಲೆವಿಯೇತರ ಸಕ್ಕರೆಯು ಮುಕ್ತಮಾರುಕಟ್ಟೆಯಲ್ಲಿ ಸರಬರಾಜು ಮತ್ತು ಬೇಡಿಕೆಗಳ ಪರಿಸ್ಥಿತಿಗನುಗುಣವಾಗಿ ನಿರ್ಧರಿಸಲ್ಪಡುವ ಬೆಲೆಗಳಲ್ಲಿ ಮಾರಾಟವಾಗುತ್ತಿತ್ತು.

ಸಕ್ಕರೆಯು ಅಭಾವವಿರುವುದರಿಂದ, ಮುಂದಿನ ಎರಡು ತಿಂಗಳು ಹಬ್ಬಗಳ ಕಾಲವಾದುದರಿಂದ, ಹೊಸ ಸಕ್ಕರೆ ಬರಲು ಇನ್ನೂ ಎರಡು ತಿಂಗಳಿರುವುದರಿಂದ, 1-9-80ರಿಂದ 15-11-80ರ ವರೆಗೆ ಕೇಂದ್ರ ಸರಕಾರವು ಹೊಸ ಸಕ್ಕರೆ ಧೋರಣೆಯನ್ನು ಘೋಷಿಸಿತು. ಅದರಂತೆ, ಮುಕ್ತಮಾರುಕಟ್ಟೆಯಲ್ಲಿ ಲೆವಿಯೇತರ ದಾಸ್ತಾನು ಸಕ್ಕರೆಯನ್ನೂ ಕೆ. ಜಿ. ಗೆ ರೂ. 6-10ರ ದರದಲ್ಲಿಯೇ ಗ್ರಾಹಕರಿಗೆ ಮಾರಬೇಕು.

ಆದರೆ, ಹೊಸ ಧೋರಣೆಯ ಪರಿಣಾಮ ಬೇರೆಯೇ ಆಯಿತು. ಕೇಂದ್ರಸರಕಾರ ಹೊಸ ಧೋರಣೆ ಘೋಷಿಸಿ, ಮುಂದಿನ ಜವಾಬ್ದಾರಿಯನ್ನು ರಾಜ್ಯಸರಕಾರಗಳಿಗೇ ಬಿಟ್ಟು ತನ್ನ ಹೊಣೆಗಾರಿಕೆಯನ್ನು ಜಾರಿಸಿಕೊಂಡಿತು. ರಾಜ್ಯಸರಕಾರಗಳು ಹೊಸ ಧೋರಣೆಯಂತೆ ಲೆವಿಯೇತರ ಸಕ್ಕರೆಯನ್ನು ತಮ್ಮ ಏಜನ್ಸಿಗಳ ಮೂಲಕ ಸಕ್ಕರೆ ಮಿಲ್ಲು ಮಾಲಕರಿಂದ ಪಡೆಯಲು ತತ್‌ಕ್ಷಣ ಸನ್ನದ್ಧರಾಗಿರಲಿಲ್ಲ ಇಂತಹ ಜವಾಬ್ದಾರಿ ತಮ್ಮ ಮೇಲೆ ಬರುವುದೆಂದು ರಾಜ್ಯ ಸರಕಾರಗಳು ಊಹಿಸಿರಲೂ ಇಲ್ಲ. ಹೊಸ ಧೋರಣೆಯನ್ನು ಕೇಂದ್ರ ಸರಕಾರವು ರಾಜ್ಯಸರಕಾರಗಳ ಸಮ್ಮತಿ ಇಲ್ಲದೆ, ಅವುಗಳಿಗೆ ಬೇಕಾದ ಸಹಾಯ ಸೌಕರ್ಯಗಳನ್ನು ಒದಗಿಸದೆ ಏಕಾಏಕಿಯಾಗಿ ಘೋಷಿಸಿ ದೊಡ್ಡ ಗೊಂದಲವನ್ನುಂಟುಮಾಡಿತು. ಪರಿಣಾಮವಾಗಿ, ರಾಜ್ಯಸರಕಾರಗಳು ಸಕ್ಕರೆ ಮಿಲ್ಲು ಮಾಲಕರಿಂದ ಲೆವಿಯೇತರ ಸಕ್ಕರೆಯನ್ನು ಖರೀದಿಸುವುದು ವಿಳಂಬವಾಯಿತು. ಕೆಲವು ರಾಜ್ಯಗಳಲ್ಲಿ ಮಿಲ್ಲು ಮಾಲಕರು ರಾಜ್ಯ

ಸುತ್ತಿರುವವರ ಮೇಲೆ ಸರಕಾರ ಕಠಿಣ ಶಿಸ್ತಿನ ಕ್ರಮ ಕೈಗೊಳ್ಳುತ್ತಿದೆ!

ಸದ್ಯದ ಸಕ್ಕರೆ ವಿತರಣೆಯ ಸೋಲಿಗೆ ಮಿಲ್ಲು ಮಾಲಕರು ಕೇಂದ್ರ ಸರಕಾರವನ್ನು ದೂರುವರು! ಕೇಂದ್ರ ಸರಕಾರ ರಾಜ್ಯಸರಕಾರಗಳನ್ನು ದೂರುವುದು, ರಾಜ್ಯಸರಕಾರಗಳು-ಇಂದಿರಾ ಕಾಂಗ್ರೆಸ್ ಹಾಗೂ ಇತರ ಪಕ್ಷಗಳ ಆಳ್ವಿಕೆಯಲ್ಲಿದ್ದವುಗಳು-ಕೇಂದ್ರಸರಕಾರವನ್ನು ದೂರುವುವು.

ಈ ವರ್ಷ ಸ್ವಲ್ಪ ಅಭಾವ ಪರಿಸ್ಥಿತಿ ಇರುವುದು ತಿಳಿದಿದ್ದರೂ, ಇಂದಿರಾ ಸರಕಾರ ಮೇ ತಿಂಗಳಲ್ಲಿ ರಾಜ್ಯ ವಿಧಾನಸಭಾ ಚುನಾವಣೆಯಲ್ಲಿ ಏರುತ್ತಿರುವ ಸಕ್ಕರೆಯ ದರವನ್ನು ಇಳಿಸಲು ಧಾರಾಳವಾಗಿ ಸಕ್ಕರೆ ಬಿಡುಗಡೆ ಮಾಡಿದುದರಿಂದಲೂ, ಕೊರತೆ ನೀಗಿಸಲು ಸಕ್ಕರೆ ಆಮದು ಮಾಡಿಕೊಳ್ಳುವುದು ತಡವಾದುದರಿಂದಲೂ, ನಿರೀಕ್ಷಿಸಿದ ನಾಲ್ಕು ಲಕ್ಷ ಟನ್ ಆಮದಿನಲ್ಲಿ ಇನ್ನೂ ಎರಡು ಲಕ್ಷ ಟನ್ ಬರಲು ಬಾಕಿ ಇರುವುದರಿಂದಲೂ, ದಾಸ್ತಾನು ಪರಿಸ್ಥಿತಿ ಹದಗೆಡುತ್ತಿರುವುದರಿಂದಲೂ, ಹೊಸ ಸಕ್ಕರೆ ಮಾರುಕಟ್ಟೆಗೆ ಬರಲು ಇನ್ನೂ ಕಾಲಾವಕಾಶವಿರುವುದರಿಂದಲೂ, ಹಬ್ಬದ ದಿನಗಳು ಸಮೀಪಿ-

ಸಕ್ಕರೆ ವಿತರಣೆಯಲ್ಲಿ ಸಂಪೂರ್ಣ ಸೋಲು

ಸುವಾಗ ಇಂದಿರಾ ಕಾಂಗ್ರೆಸ್‌ನವರು ಜನರಿಗೆ ಔಪಚಾರಿಕ ಉಪದೇಶ ಕೊಡಲಾರಂಭಿಸಿದ್ದಾರೆ ! ಜೊತೆಗೇ, ಇವರ ಚುನಾವಣೆಗೆ ಧನಸಹಾಯ ಮಾಡಿದ ಕೈಗಾರಿಕೋದ್ಯಮಿಗಳಿಗೆ ಮತ್ತು ವ್ಯಾಪಾರಿಗಳಿಗೆ ಅಭಾವ ಪರಿಸ್ಥಿತಿಯಲ್ಲಿ ಲಾಭ ದೋಚಲು ನೆರವಾಗುತ್ತಿದ್ದಾರೆ. ಇವರ ಧೋರಣೆ ಚೆನ್ನಾಗಿದೆ! ಓಟು ಕೊಟ್ಟವರಿಗೆ ಉಪದೇಶ, ನೋಟು ಕೊಟ್ಟವರಿಗೆ ಲಾಭ !

ಜನಸಾಮಾನ್ಯರು ಸಕ್ಕರೆಗಾಗಿ ಪರದಾಡುವುದು ಶ್ರೀಮಂತರಂತೆ ದಿನನಿತ್ಯವೂ ಭಕ್ಷಭೋಜ್ಯಗಳನ್ನು ಮಾಡಿ ತಿನ್ನಲಿಕ್ಕಲ್ಲ. ದಿನವೂ 2-3ಕಪ್‌ಚಾ ಕಾಫಿಗೆ 2-3ಚಮಚ ಸಕ್ಕರೆಗಾಗಿ ಅವರ ಪರದಾಟ. ಇಂದಿರಾ ಕಾಂಗ್ರೆಸ್‌ನ ಆಳ್ವಿಕೆಯಲ್ಲಿ ಚಾ-ಕಾಫಿಗೆ ಶ್ರೀಮಂತರು ಮಾತ್ರ ಸಕ್ಕರೆ ಹಾಕಿ ಕುಡಿಯಬೇಕೆ ? ಬಡವರು ಬೆಲ್ಲದ ಚಾ-ಕಾಫಿ ಕುಡಿಯಬೇಕೆ ? ಶ್ರೀಮಂತರ ಪ್ರತಿದಿನ ಹಬ್ಬ, ಸಭೆ, ಸಮಾರಾಧನೆ, ಸಮಾರಂಭಗಳಿಗೆ ಸಕ್ಕರೆ ಧಾರಾಳವಾಗಿ ಬಳಸುತ್ತಿದ್ದರೆ, ಜನಸಾಮಾನ್ಯರು ವರ್ಷಕ್ಕೆ ಒಂದೆರಡು ಹಬ್ಬದ ದಿನಗಳಲ್ಲಾದರೂ ಸಿಹಿತಿಂಡಿ ಉಣಬಾರದೆ ? ಶ್ರೀಮಂತರ ಸಿಹಿ ಮೂತ್ರ ರೋಗ ಬಡವರಿಗೆ ಬಾರದಿರಲಿ ಎಂಬ ಕಾಳಜಿ ಇರುವ ಈ 'ಬಡವರ ಬಂಧುಗಳು' ಬಡವರು ಪೌಷ್ಟಿಕ ಆಹಾರವಿಲ್ಲದೆ ಕ್ಷಯರೋಗದಿಂದ ಬಳ

ಸಪ್ಟೆಂಬರ್ ತಿಂಗಳ ಮೊದಲಿನಿಂದಲೇ ಪಡಿತರ ಅಂಗಡಿಗಳಲ್ಲಿಯೂ ನಿಯಮಿತ ಪ್ರಮಾಣದ ಸಕ್ಕರೆಯೂ ಸಕಾಲಕ್ಕೆ ಸಿಗುತ್ತಿಲ್ಲ. ಅಲ್ಪಸ್ವಲ್ಪ ಸಕ್ಕರೆಯನ್ನು 2-3 ಕಂತುಗಳಲ್ಲಿ ಕೊಡಲಾಗುತ್ತಿದೆ. ಗ್ರಾಮೀಣ ಪ್ರದೇಶಗಳಲ್ಲಿ ಮತ್ತು ಸಣ್ಣ ಪೇಟೆಪಟ್ಟಣಗಳಲ್ಲಿ 'ಸಕ್ಕರೆ ಇಲ್ಲ' ಎಂಬ ಶಿರೋನಾಮೆ ಎಲ್ಲಾ ಪಡಿತರ ಅಂಗಡಿಗಳಲ್ಲಿ ಹಾಕಿರುತ್ತಾರೆ. ಆದರೆ. ಕಳ್ಳಸಂತೆಯಲ್ಲಿ ಅಧಿಕ ಬೆಲೆಗೆ ಸಕ್ಕರೆ ಸಾಕಷ್ಟು ಸಿಗುತ್ತದೆ, ಸಕ್ಕರೆ ಕೆ ಜಿ.ಗೆ ರೂ 6-10ರ ದರದಲ್ಲಿ ಪಡಿತರ ಅಂಗಡಿಗಳಲ್ಲಿ ಕೊಡಲಾಗುವುದೆಂಬ ಹೊಸ ಸಕ್ಕರೆ ಧೋರಣೆಯನ್ನು ಘೋಷಿಸಿ ಒಂದು ತಿಂಗಳಾಗುತ್ತಾ ಬಂದರೂ ಹೆಚ್ಚಿನ ಕಡೆಗಳಲ್ಲಿ ವಿತರಣೆ ಪ್ರಾರಂಭವಾಗಲೇ ಇಲ್ಲ. ವಿತರಣೆ ಆಗುವುದೂ ½ ಕೆ. ಜಿ. ಅಥವಾ 1 ಕೆ ಜಿ ತಿಂಗಳಿಗೆ, ಅದೂ ಕೆಂಪು ಸಕ್ಕರೆ! ಒಟ್ಟಿನಲ್ಲಿ ಇಂದಿರಾ ಸರಕಾರ ಸಕ್ಕರೆ ವಿತರಣೆಯಲ್ಲಿ ಸಂಪೂರ್ಣ ಸೋತಿದೆ. ಯಾಕೆ ಹೀಗಾಯಿತು ?

1. ಲೆವಿಸಕ್ಕರೆಯು ನ್ಯಾಯಬೆಲೆ ಅಂಗಡಿಗಳಲ್ಲಿ ಪಡಿತರ ಕಾರ್ಡುಗಳ

ಸಕ್ಕರೆಯನ್ನೂ ಸಾರ್ವಜನಿಕ ವಿತರಣಾ ವ್ಯವಸ್ಥೆಯಲ್ಲಿ ಮೊದಲು ಕೆ. ಜಿ. ಗೆ ರೂ. 5ರಂತೆ ನಂತರ ರೂ. 6-10 ರಂತೆ ಮಾರಲು ನಿಶ್ಚಯಿಸಲಾಯಿತು. ಇದಕ್ಕಾಗಿ, ಸಕ್ಕರೆ ಮಿಲ್ಲು ಮಾಲಕರು ತಮ್ಮ ಲೆವಿಯೇತರ ಸಕ್ಕರೆಯನ್ನು ಕೇಂದ್ರ ಹಾಗೂ ರಾಜ್ಯ ಸರಕಾರಗಳ ಏಜನ್ಸಿಗಳಿಗೆ ಏರಿಕೆಯ ದರದಲ್ಲಿ ಒಪ್ಪಿಸಿಕೊಡಬೇಕೆಂದು ಆದೇಶಿಸಲಾಯಿತು. ವ್ಯಾಪಾರಸ್ಥರು ತಮ್ಮಲ್ಲಿದ್ದ ಹಳೇ ದಾಸ್ತಾನುಗಳನ್ನೂ ಈ ಹೊಸ ದರದಲ್ಲಿ ಗ್ರಾಹಕರಿಗೆ ಮಾರಬೇಕೆಂದು ಆದೇಶಿಸಲಾಯಿತು. ಪರಿಣಾಮವಾಗಿ, 1-9-80ರಿಂದ ಸಕ್ಕರೆಯು ಮಾರುಕಟ್ಟೆಯಲ್ಲಿ ವಿತರಣೆಯಾಗುವಂತಾಯಿತು.

1. ಲೆವಿಸಕ್ಕರೆಯು ಮೊದಲಿನಂತೆಯೇ ನ್ಯಾಯಬೆಲೆ ಅಂಗಡಿಗಳಲ್ಲಿ ಪಡಿತರ ಕಾರ್ಡುಗಳ ಮೂಲಕ ನಿಯಮಿತ ಪ್ರಮಾಣದಲ್ಲಿ ಕೆ. ಜಿ. ಗೆ ರೂ. 2-85ರಂತೆ ವಿತರಣೆಯಾಗಬೇಕು.

2. ಲೆವಿಯೇತರ ಸಕ್ಕರೆಯೂ ಈ ಅಂಗಡಿಗಳಲ್ಲಿ ಪಡಿತರ ಕಾರ್ಡುಗಳ ಮೂಲಕ ನಿಯಮಿತ ಪ್ರಮಾಣದಲ್ಲಿ ಕೆ. ಜಿ. ಗೆ ರೂ. 6-10ರ ದರದಲ್ಲಿ ವಿತರಣೆಯಾಗಬೇಕು.

3. ಮುಕ್ತಮಾರುಕಟ್ಟೆಯಲ್ಲಿ ವ್ಯಾಪಾರಸ್ಥರು ತಮ್ಮ ಹಳೆಯ

ಸರಕಾರಗಳ ಏಜನ್ಸಿಗಳಿಗೆ ತಮ್ಮ ದಾಸ್ತಾನು ಬಿಟ್ಟುಕೊಡಲು ನಿರಾಕರಿಸಿದರು. ಹೀಗಾಗಿ, ಮುಕ್ತಮಾರುಕಟ್ಟೆಯಲ್ಲಿ ಸಕ್ಕರೆ ಸರಬರಾಜು ನಿಂತುಹೋಗಿ ಬೆಲೆಗಳು ಗಗನಕ್ಕೇರಲಾರಂಭಿಸಿದವು. ಇದೇ ಸುಸಂಧಿ ಎಂದು ಸಕ್ಕರೆ ವ್ಯಾಪಾರಿಗಳು ತಮ್ಮ ಹಳೇ ದಾಸ್ತಾನುಗಳನ್ನು ನಿಗದಿಯಾದ ಬೆಲೆಗಿಂತ ಹೆಚ್ಚಿನ ದರಗಳಲ್ಲಿ ಮಾರಲಾರಂಭಿಸಿದರು. ಕೆಲವು ಮಿಲ್ಲು ಮಾಲಕರು, ಕೆಲವು ಪಡಿತರ ಅಂಗಡಿಗಳು ತಮ್ಮ ದಾಸ್ತಾನುಗಳನ್ನೂ ಖಾಸಗೀ ವ್ಯಾಪಾರಸ್ಥರಿಗೆ ಮಾರಿದವು! ಅವುಗಳನ್ನೂ 'ಹಳೇ ದಾಸ್ತಾನು' ಎಂದೇ ವ್ಯಾಪಾರಸ್ಥರು ಮುಕ್ತಮಾರುಕಟ್ಟೆಯಲ್ಲಿಯೂ ಕಳ್ಳಸಂತೆಯಲ್ಲಿಯೂ ಮಾರಿ ಅತ್ಯಧಿಕ ಲಾಭ ದೋಚತೊಡಗಿದರು. ಸಕ್ಕರೆ ಬೆಲೆ ಕೆ. ಜಿ ಗೆ ರೂ. 7,8...10,11...20ರಷ್ಟು ಏರಿತು !

ಅಕ್ರಮ ದಾಸ್ತಾನುಗಾರರ, ಕಳ್ಳಸಂತೆ ಕದೀಮರ, ಹೊಸ ಧೋರಣೆಯನ್ನು ಉಲ್ಲಂಘಿಸಿದವರ ವಿರುದ್ಧ ಇಂದಿರಾ ಸರಕಾರ ಯಾವ ಕಾನೂನನ್ನೂ ಜಾರಿಮಾಡಲಿಲ್ಲ, ಮುಂಜಾಗ್ರತಾ ಕಾನೂನಿನಂತೆ ಅವರನ್ನು ಜೈಲಿಗೂ ಸೇರಿಸಲಿಲ್ಲ, ಶಿಕ್ಷಿಸಲೂ ಇಲ್ಲ. ಆದರೆ, ಬೆಲೆಏರಿಕೆಯ ವಿರುದ್ಧ ಮುಷ್ಕರ, ಬಂದ್, ಮೆರವಣಿಗೆ ನಡೆ-

ಸುತ್ತಿರುವುದರಿಂದಲೂ, ಸಾರ್ವಜನಿಕ ವಿತರಣಾ ವ್ಯವಸ್ಥೆಯು ಸಮರ್ಪಕವಾಗಿರದಿರುವುದರಿಂದಲೂ, ಮಿಲ್ಲು ಮಾಲಕರು, ವ್ಯಾಪಾರಸ್ಥರು ಅಭಾವ ಪರಿಸ್ಥಿತಿಯಲ್ಲಿ ಭಾರೀ ಲಾಭ ದೋಚುತ್ತಿದ್ದಾರೆ. ಕೇಂದ್ರ ಆಹಾರ ಮಂತ್ರಿಗಳು ಹೊಸ ಧೋರಣೆ ಘೋಷಿಸಿ ವಿದೇಶಕ್ಕೆ ಹೋಗಿಬಿಟ್ಟಿದ್ದಾರೆ. ಹಿರಿಯ ಅಧಿಕಾರಿಗಳು ಮೌನವಾಗಿದ್ದಾರೆ. ಬಡ ಗ್ರಾಹಕರು ಸಕ್ಕರೆಗಾಗಿ ಬಾಯಿಬಿಡುತ್ತಿದ್ದಾರೆ, ಇದೇನು ಭದ್ರ ಸರಕಾರದ ನಗ್ನ ಚಿತ್ರ !

ಮಿಲ್ಲು ಮಾಲಕರಿಂದ, ಖಾಸಗೀ ವ್ಯಾಪಾರಸ್ಥರಿಂದ ಸದ್ಯ ಇರುವ ಸಕ್ಕರೆ ದಾಸ್ತಾನುಗಳೆಲ್ಲವನ್ನೂ ಕಡ್ಡಾಯವಾಗಿ ಸರಕಾರಿ ಏಜನ್ಸಿಗಳು ವಹಿಸಿಕೊಂಡು ನ್ಯಾಯಬೆಲೆಯಲ್ಲಿ ಪಡಿತರ ಕಾರ್ಡುಗಳ ಮೂಲಕ ಸಾಕಷ್ಟು ಪ್ರಮಾಣದಲ್ಲಿ ದೇಶಾದ್ಯಂತ ಸಾರ್ವಜನಿಕ ವಿತರಣೆ ಮಾಡಿದ್ದರೆ, ಇಂತಹ ದುಃಸ್ಥಿತಿ ಉಂಟಾಗುತ್ತಿರಲಿಲ್ಲ. ಬಂಡವಾಳಶಾಹಿ ಆರ್ಥಿಕ ಪದ್ಧತಿಯನ್ನು ಅನುಸರಿಸುತ್ತಿರುವ ಸರಕಾರದಿಂದ ಇಂತಹ ಜನೋಪಯೋಗಿ ಕ್ರಮವನ್ನು ನಿರೀಕ್ಷಿಸುವುದು ವ್ಯರ್ಥ.

○

ಗಾಂಧೀವಾದದ ಅರ್ಥ

—ಇ.ಎಂ.ಎಸ್.

(ಅಕ್ಟೋಬರ್ ೨ರಂದು ಗಾಂಧಿ ಜಯಂತಿಯನ್ನು ಆಚರಿಸಲಾಯ್ತು. ಆದರೆ ಗಾಂಧೀಜಿ ಇಂದೆಲ್ಲಿರುವರು?)

ಮಹಾತ್ಮ ಗಾಂಧಿಯವರ ಜೀವನ ಮತ್ತು ಬೋಧನೆಗಳ ಮಹತ್ವವೇನು? ೧೯೨೦ರಲ್ಲಿ ಮಹಾತ್ಮರು ತಮ್ಮ ಆತ್ಮಕಥೆ ಬರೆಯತೊಡಗಿದ್ದಾಗ ಹೇಳಿಕೊಂಡಂತೆ ಅವರ ಜೀವನಕಥೆಯು "ಸತ್ಯದೊಂದಿಗೆ ನಡೆಸಿದ ಪ್ರಯೋಗಗಳ ಕಥೆಯೇ"?

ಮೋಹನದಾಸ್ ಗಾಂಧಿಯು "ರಾಷ್ಟ್ರಪಿತ"ನಾಗಿ ಬೆಳೆದ ವಿಕಾಸಕ್ರಿಯೆಯನ್ನು ನಾವು ಹೇಗೆ ವಿವರಿಸಬಹುದು? ಮೊದಲನೆ ಮಹಾಯುದ್ಧದಲ್ಲಿ ಶ್ರದ್ಧಾವಂತ ಅಧಿಕಾರಿಯಾಗಿದ್ದ ಇವರು 1942ರ ಹೊತ್ತಿಗೆ, "ಆಳುವ ಬ್ರಿಟಿಷ್ ದೊರೆಗಳೇ ಭಾರತ ಬಿಟ್ಟು ತೊಲಗಿ" ಎಂಬ ಸ್ಫೂರ್ತಿದಾಯಕ ಘೋಷಣೆಯೊಂದಿಗೆ 'ಮಾಡು ಅಥವಾ ಮಡಿ' ಎಂಬ ಚಳುವಳಿಯ ಮುಂದಾಳಾದದ್ದು ಹೇಗೆ? ಪೋರಬಂದರ್ ರಾಜ್ಯದ ಆಳುವ ಊಳಿಗಮಾನ್ಯ ದೊರೆಗಳ ನಮ್ರ ಸೇವಕರ ಕುಟುಂಬವೊಂದರ ಕುಡಿಯಾಗಿ ಹುಟ್ಟಿದ ಈತ ಭಾರತೀಯ ರಾಜ್ಯಗಳಲ್ಲಿ ಪ್ರಜಾಪ್ರಭುತ್ವಕ್ಕೋಸ್ಕರ ಸೆಣಸಿದ್ದಾದರೂ ಹೇಗೆ? ಯಾವ ತೀವ್ರಗಾಮಿ ಚಳುವಳಿಗಳಿಂದಲೂ ಆಕರ್ಷಿತನಾಗದೆ ಆದರೆ ಲಂಡನ್ನಿನ ಶಾಕಾಹಾರಿ ಸಂಘಗಳಲ್ಲಿ ಸಕ್ರಿಯರಾಗಿದ್ದ ಧಾರ್ಮಿಕ ಮನೋಭಾವದ ಯುವಕ ಗಾಂಧಿ ಸಾಮ್ರಾಜ್ಯಶಾಹಿಯ ವಿರೋಧಿ ಮತ್ತು ಈ ದೇಶದಲ್ಲಿ ಪ್ರಜಾಪ್ರಭುತ್ವವಾದಿ ಚಳುವಳಿಯ ನಾಯಕತ್ವ ಪಡೆದದ್ದು ಹೇಗೆ?

ಗಾಂಧಿಯವರ ಘಟನಾಪೂರ್ಣ ಜೀವನ ವೃತ್ತಾಂತವನ್ನು ನೋಡಿದಾಗ ಮೇಲೆ ಹೇಳಿದ ಅನೇಕ ಪ್ರಶ್ನೆಗಳು ಸಹಜವಾಗಿಯೇ ಏಳುತ್ತವೆ. ಇವು ಕೇವಲ ಅಸಂಗತ ಪ್ರಶ್ನೆಗಳಲ್ಲ. ಈ ಪ್ರಶ್ನೆಗಳು ಈ ದೇಶದ ಪ್ರತಿಯೊಬ್ಬ ಪ್ರಜಾಪ್ರಭುತ್ವವಾದಿಯೂ ನಿರ್ವಹಿಸಬೇಕಾಗಿರುವ ಕಾರ್ಯಾಚರಣೆಯ ಕಾರ್ಯಕ್ರಮಗಳ ಮೇಲೆ ಪ್ರಭಾವ ಬೀರುವಂತಹವು. ಇಂದು ಮಹಾತ್ಮಾ ನಮ್ಮ ನಡುವೆ ಇಲ್ಲದಿದ್ದರೂ ಅವರು ಜೀವನದುದ್ದಕ್ಕೂ ತಿಳಿಯಹೇಳಿದ ಬೋಧನೆಗಳು ಇಂದಿಗೂ ಪ್ರಜಾಪ್ರಭುತ್ವ ಚಳುವಳಿಯ ಅನೇಕ ಗುಂಪುಗಳು ಹಾಗೂ ವ್ಯಕ್ತಿಗಳ ಚಟುವಟಿಕೆಗಳಿಗೆ ಮಾರ್ಗದರ್ಶಿಯಾಗಿದೆ.

ಉದಾಹರಣೆಗೆ, ಭೂದಾನ ಚಳುವಳಿ ಗಾಂಧೀಜಿಯವರ ಬೋಧನೆಗಳನ್ನೇ ಆಧರಿಸಿದೆ. ಭೂದಾನ ಚಳುವಳಿಯ ಸಿದ್ಧಾಂತ ಮತ್ತು ಕಾರ್ಯಾಚರಣೆಯನ್ನು ಪೂರ್ತಿ ಒಪ್ಪದೆ ಇರಬಹುದು, ಆದರೆ ಅದನ್ನು ನಿರ್ಲಕ್ಷಿಸುವುದು ಸರಿಯಲ್ಲ. ಸದ್ಯದ ಭೂ ಒಡೆತನ ವ್ಯವಸ್ಥೆಯ ವಿರುದ್ಧ ಬಂಡಾಯವೆದ್ದದ್ದು ಹಾಗೂ ಭೂ ಆಸ್ತಿಯ ಅಸಮಾನ ಹಂಚಿಕೆಯನ್ನು "ಅಹಿಂಸಾ ಮಾರ್ಗ"ದಿಂದ ಸರಿಪಡಿಸಬೇಕೆಂದು ಒತ್ತಾಯ ಪಡಿಸಿದ್ದು ಭೂದಾನ ಚಳುವಳಿಯ ಎರಡು ಮುಖ್ಯ ಅಂಶಗಳು. ಇವು ಭೂಹಂಚಿಕೆಯಂತಹ ದೇಶದ ಅತಿಮುಖ್ಯ ಸಮಸ್ಯೆಗೆ ಗಾಂಧೀಜಿಯವರ ಬೋಧನೆಯನ್ನು ಅನ್ವಯಿಸುವ ಕ್ರಮವೇ ಆಗಿದೆ.

ಒಂದಲ್ಲ ಒಂದು ರೀತಿಯಲ್ಲಿ ಶಾಂತಿಯುತ ಚಳುವಳಿಯೊಂದಿಗೆ ಸಂಪರ್ಕ ಇಟ್ಟುಕೊಂಡಿರುವ ಇಂದಿನ ಅನೇಕ ಗಾಂಧೀವಾದಿಗಳು (ವಿನೋಬಾರೂ ಸೇರಿದಂತೆ) ಗಾಂಧೀಜಿ ಬೋಧನೆಗಳಿಂದ ಸ್ಫೂರ್ತಿ ಪಡೆದವರೆಂಬುದನ್ನು ನಾವು ಮರೆಯಬಾರದು ಆದರೆ ಇದೇ ಸಮಯದಲ್ಲಿ ಇಂದಿನ ಕೇಂದ್ರ ಹಾಗೂ ರಾಜ್ಯ ಸರಕಾರಗಳ ನಾಯಕರುಗಳು, ಕಾರ್ಮಿಕವರ್ಗ ಹಾಗೂ ರೈತಾಪಿವರ್ಗಗಳ ಬೆಳೆಯುತ್ತಿರುವ ಸಮೂಹ ಚಳುವಳಿಯನ್ನು ದೊಂಬಿಯ ಹಿಂಸಾಚಾರವೆಂದು ಬಣ್ಣಿಸಿ ಅದನ್ನು ಹತ್ತಿಕ್ಕಲು ಗಾಂಧೀಜಿಯವರ ಬೋಧನೆಗಳನ್ನೇ ಉಪಯೋಗಿಸುತ್ತಿದ್ದಾರೆ ಎಂಬುದನ್ನು ನಾವು ಮರೆಯಬಾರದು.

ಗಾಂಧೀಜಿಯವರು ನಮ್ಮ ರಾಷ್ಟ್ರೀಯ ಚಳುವಳಿಯ ಚರಿತ್ರೆಯಲ್ಲಿ ವಹಿಸಿದ ಅತಿ ಮಹತ್ತರ ಪಾತ್ರದಿಂದಾಗಿ, ಕಮ್ಯುನಿಸ್ಟ್ ಪಕ್ಷವನ್ನುಳಿದು ಬೇರೆ ಎಲ್ಲಾ ಪಕ್ಷಗಳು ತಮ್ಮ ಕಾರ್ಯನೀತಿಯನ್ನು ಸಮರ್ಥಿಸಿಕೊಳ್ಳಲು ಗಾಂಧೀಜಿಯವರ ಬೋಧನೆಗಳನ್ನೇ ಉಪಯೋಗಿಸಿಕೊಳ್ಳುತ್ತಿದ್ದಾರೆ ಆದ್ದರಿಂದ ಗಾಂಧೀಜಿಯವರ ಮತ್ತು ಅವರ ಬೋಧನೆಗಳ ಪಾತ್ರ ಹಾಗು ಮಹತ್ವವನ್ನು ವಿಶ್ಲೇಷಣೆಗೆ ಒಳಪಡಿಸುವುದು ಪ್ರಜಾಪ್ರಭುತ್ವ ಚಳುವಳಿಯನ್ನು ಇನ್ನೂ ಮುಂದೆ ಕೊಂಡೊಯ್ಯುವ ದೃಷ್ಟಿಯಿಂದ ಬಹು ಮುಖ್ಯವಾಗಿರುತ್ತದೆ.

ಇದೇನು ಸುಲಭದ ಕಾರ್ಯವಲ್ಲ. ಇತರ ಅನೇಕ ಚಾರಿತ್ರಿಕ ವ್ಯಕ್ತಿಗಳಂತೆ ಗಾಂಧೀಜಿ ಕೂಡ ಸಂಕೀರ್ಣ ವ್ಯಕ್ತಿತ್ವವನ್ನು ಪಡೆದಿದ್ದವರು. ಅವರ ಬೋಧನೆಗಳ ಮೇಲೆ ಅವರನ್ನು; "ಜನಸಮೂಹವನ್ನು ಸಾಮ್ರಾಜ್ಯಶಾಹಿ ವಿರೋಧಿ ಚಟುವಟಿಕೆಯಲ್ಲಿ ತೊಡಗುವಂತೆ ಪ್ರೇರೇಪಿಸಿದ ರಾಷ್ಟ್ರೀಯ ಚಳವಳಿಯ ಸ್ಫೂರ್ತಿದಾಯಕ ವ್ಯಕ್ತಿ" ಎಂದಾಗಲೀ, "ನಮ್ಮ ರಾಷ್ಟ್ರೀಯ ಚಳುವಳಿ ಕ್ರಾಂತಿ ಮಾರ್ಗದಲ್ಲಿ ಬೆಳೆಯುವುದನ್ನು ತಡೆಯಲು ತನ್ನಿಂದ ಏನೇನು ಸಾಧ್ಯವಿದೆಯೊ ಅದನ್ನು ಮಾಡಿದ ಕ್ರಾಂತಿ ವಿರೋಧಿ" ಎಂದಾಗಲೀ ಸರಳೀಕರಿಸಿ ಹೇಳುವುದಕ್ಕೆ ಸಾಧ್ಯವಿಲ್ಲ.

ಅವರ ಜೀವನ ಘಟನಾವಳಿಗಳಿಂದ ತುಂಬಿದೆ ಅವರ ಭಾಷಣ ಮತ್ತು ಬರಹಗಳು ಮಾನವೀಯ ಸಮಾಜದ ಎಲ್ಲಾ ಕ್ಷೇತ್ರಗಳ ಚಟುವಟಿಕೆಗಳನ್ನು ಕುರಿತದ್ದಾಗಿದೆ. ಅವರ ಕಾರ್ಯಗಳು ಎಷ್ಟೋ ವೇಳೆ ನಾಟಕದಲ್ಲಾದಂತೆ ಇರುತ್ತವೆ. ಆದ್ದರಿಂದಲೇ ಗಾಂಧೀಜಿಯವರ ಜೀವನ ಮತ್ತು ಬೋಧನೆಗಳನ್ನು ಅಭ್ಯಸಿಸುವ ಯಾವುದೇ ವಿದ್ಯಾರ್ಥಿಗೆ ತಾನ ಗಾಂಧೀಜಿ ಮತ್ತು ಗಾಂಧೀವಾದದ ಬಗ್ಗೆ ಇಟ್ಟುಕೊಂಡಿರುವ ಯಾವುದೇ ನೆಚ್ಚಿನ ಸಿದ್ಧಾಂತವನ್ನು ಅದಕ್ಕೆ ಹೊಂದಿಸಿ ಹೇಳಲು ಸುಲಭವಿದೆ. ಇದಕ್ಕಾಗಿ ಅಂತಹ ವಿದ್ಯಾರ್ಥಿ ಗಾಂಧೀಜಿಯವರ ಜೀವನದ ಆಯ್ದ ಕೆಲವು ಘಟನೆಗಳನ್ನು ಮತ್ತು ಅವರ ಭಾಷಣ ಮತ್ತು ಬರಹಗಳಿಂದ ಆರಿಸಿದ ಕೆಲವು ಹೇಳಿಕೆಗಳನ್ನು ಒಂದು ಕ್ರಮದಲ್ಲಿ ಜೋಡಿಸುವುದಷ್ಟೆ ಮಾಡಬೇಕಾಗಿರುವುದು. ಆದರೆ ಇತಿಹಾಸದ ದೃಷ್ಟಿಯಿಂದ ನಿಜವಾಗಿಯೂ ಮಹತ್ವ ಪಡೆದವುಗಳನ್ನು ಆರಿಸಿಕೊಳ್ಳುವುದು ಬಹಳ ಕಷ್ಟಕರವಾದ ಕೆಲಸ. ಅವರ ಜೀವನದ ವಿವಿಧ ಕಾರ್ಯಕಲಾಪಗಳಿಗೂ ಅವರ ಬೋಧನೆಗಳಿಗೂ ಇರುವ ಅಂತ-ಸಂಬಂಧವನ್ನು ಕಂಡುಕೊಂಡು ಆನಂತರ ಅವರ ವ್ಯಕ್ತಿತ್ವ ಹಾಗೂ ಜೀವನೋದ್ದೇಶಗಳನ್ನು ಸಮಗ್ರವಾಗಿ ಅರ್ಥೈಸಿಕೊಳ್ಳಬೇಕಾಗುತ್ತದೆ.

ದುರದೃಷ್ಟವಶಾತ್ ಈ ದಿಸೆಯಲ್ಲಿ ಮಾಡಿದ ಎಲ್ಲಾ ಪ್ರಯತ್ನಗಳು ಎರಡು ರೀತಿಯದ್ದಾಗಿದೆ. ಒಂದು ತುಂಬಾ ಸರಳೀಕರಿಸಿದ್ದು ಮತ್ತು ವಿಮರ್ಶಾತ್ಮಕವಾಗಿ ನೋಡದೆ ಏಕಮುಖವಾಗಿ ಗೌರವ ಸಲ್ಲಿಸಿ ಹೊಗಳಿದ್ದು. ಇನ್ನೊಂದು ಅಷ್ಟೇ ಸರಳೀಕರಿಸಿ ಏಕಮುಖವಾಗಿ ಟೀಕಿಸಿ ತೆಗಳಿದ್ದು. ಆದ್ದರಿಂದ ಈ ಎರಡೂ ನ್ಯೂನತೆಗಳಿಂದಲೂ ಹೊರತಾದ ಪ್ರಯತ್ನ ಮಾಡಬೇಕು. ಪ್ರಸ್ತುತ ಲೇಖಕ ಗಾಂಧೀಜಿಯವರ ಜೀವನ ಹಾಗೂ ಬೋಧನೆಗಳಿಂದ ಕಂಡದ್ದನ್ನು ವಿಶ್ಲೇಷಿಸಿ ಈ ಕೆಳಗೆ ಕಂಡ ತೀರ್ಮಾನಗಳಿಗೆ ಬಂದಿರುವುದು ಅಂತಹ ಪ್ರಯತ್ನಗಳಲ್ಲಿ ಒಂದಾಗಿದೆ.

ಗಾಂಧೀಜಿ ಒಬ್ಬ ಆದರ್ಶವಾದಿ ಎಂಬುದು ನಾವು ಗಮನಿಸಬೇಕಾದ ಮೊದಲನೆ ಅಂಶ. ಅವರು ಆದರ್ಶವಾದಿ ಎನ್ನುವುದು ಗಾಂಧೀಜಿ ತಾತ್ವಿಕವಾಗಿ ಭೌತವಾದವನ್ನು ವಿರೋಧಿಸಿದ ಪ್ರಾಪಂಚಿಕ ದೃಷ್ಟಿಕೋನವನ್ನು ಹೊಂದಿದ್ದರು ಎನ್ನುವ ಅರ್ಥದಲ್ಲಿ ಮಾತ್ರವಲ್ಲದೆ ಅವರು ಕೆಲವು ಆದರ್ಶಗಳನ್ನಿಟ್ಟುಕೊಂಡು ಜೀವನದ ಕೊನೆಯವರೆಗೆ ಅವುಗಳಿಗಾಗಿ ಹೋರಾಡಿದರು ಎಂಬುದೂ ಕಾರಣವಾಗಿದೆ. ಸತ್ಯ, ಅಹಿಂಸೆ, ಐಹಿಕ ಸುಖದ ತ್ಯಾಗ ಮುಂತಾದ ನೈತಿಕ ಮೌಲ್ಯಗಳು, ಶಾಂತಿ, ಸ್ವಾತಂತ್ರ್ಯ, ಪ್ರಜಾಪ್ರಭುತ್ವ ಮುಂತಾದ ರಾಜಕೀಯ ಆದರ್ಶಗಳು ಜಾತಿಭೇದದ ನಿವಾರಣೆ, ಸ್ತ್ರೀವಿಮೋಚನೆ, ಎಲ್ಲಾ ಧಾರ್ಮಿಕ ಹಾಗೂ ಜನಾಂಗಗಳ ಒಗ್ಗಟ್ಟು ಮುಂತಾದ ಸಾಮಾಜಿಕ ಉದ್ದೇಶಗಳು ಗಾಂಧೀಜಿಯವರ ಜೀವನ ಮತ್ತು ಬೋಧನೆಗಳ ಅವಿಭಾಜ್ಯ ಅಂಗವಾಗಿದ್ದವು. ಹೀಗೆ ಕೆಲವು ಆದರ್ಶಗಳಿಗೆ ಅವರು ಗಟ್ಟಿಯಾಗಿ ಅಂಟಿಕೊಂಡಿರುತ್ತಿದ್ದುದೇ ಅವರ ಸಾರ್ವಜನಿಕ ಜೀವನದ ಮೊದಲ ದಿನಗಳಲ್ಲಿ ಅವರು ದಕ್ಷಿಣ ಆಫ್ರಿಕಾದ ಸತ್ಯಾಗ್ರಹ ಚಳವಳಿಗೆ ಧುಮುಕುವಂತೆ ಮಾಡಿದ್ದು. ಈ ರೀತಿ ತತ್ವಕ್ಕೆ ಕಟ್ಟುಬಿದ್ದದ್ದೇ ಅವರು ದೇಶದ ಸ್ವಾತಂತ್ರ್ಯಕ್ಕಾಗಿ ಅಸಹಕಾರ ಚಳುವಳಿ ಮತ್ತಿತರ ಕಾರ್ಯಾಚರಣೆಯಲ್ಲಿ ತೊಡಗುವಂತೆ ಮಾಡಿದ್ದು.

ಹೀಗೆ ಅವರು ಆದರ್ಶಗಳಿಗೆ ಬದ್ಧರಾಗಿ ನಡೆದುಕೊಂಡದ್ದೇ ಅವರು ಅನೇಕ ಪ್ರಜಾಪ್ರಭುತ್ವವಾದಿ ಧ್ಯೇಯೋದ್ದೇಶಗಳಿಗೆ ಹೋರಾಟದ ಮುಂದಾಳತ್ವ ವಹಿಸುವಂತೆ ಮಾಡಿ ಕೊನೆಗೆ ರಾಷ್ಟ್ರೀಯ ಒಗ್ಗಟ್ಟಿನಂತ ಒಂದು ಸದುದ್ದೇಶ ಕಾರ್ಯದಲ್ಲಿ ಅವರನ್ನೊಬ್ಬ ಹುತಾತ್ಮರನ್ನಾಗಿ ಮಾಡಿತು.

ಎರಡನೆಯದಾಗಿ, ಇದುವರೆಗೆ ನಿದ್ರಾವಸ್ಥೆಯಲ್ಲಿದ್ದ ಲಕ್ಷಾಂತರ ಹಳ್ಳಿಯ ಬಡವರನ್ನು ಬಡಿದೆಬ್ಬಿಸಲು ಅವರ ಆದರ್ಶವಾದ ಬಹು ದೊಡ್ಡ ಪಾತ್ರ ವಹಿಸಿತು. ಈ ಬಡವರನ್ನು ಉದ್ದೇಶಿಸಿ ಮಾತನಾಡುವಾಗ ಅವರು ಬಳಸುತ್ತಿದ್ದ ಅರೆ-ಧಾರ್ಮಿಕ ಭಾಷೆ, ಅವರು ನಡೆಸುತ್ತಿದ್ದ ಸರಳ, ನಿರಾಡಂಬರ ಜೀವನ ಮತ್ತು ಅವರ ಬೇಡಿಕೆಗಳಿಗಾಗಿ ಗಾಂಧೀಜಿ ಮಾಡಿದ ಭಾವಪರವಶತೆಯ ಹೋರಾಟ, ಲಕ್ಷಾಂತರ ಗ್ರಾಮೀಣ ಬಡವರನ್ನು ಅವರತ್ತ ಆಕರ್ಷಿತರಾಗುವಂತೆ ಮಾಡಿತು. ಈ ಬಡಜನರು ಗಾಂಧೀಜಿಯನ್ನು ತಮ್ಮ ಉದ್ಧಾರಕನೆಂದು ನೋಡಿದರು. ತಮ್ಮ ಅಸಹನೀಯ ದುರವಸ್ಥೆಯಿಂದ ಪಾರು ಮಾಡಲು ಬಂದ ದೇವರ ಹೊಸ ಅವತಾರವೆಂದೇ ತಿಳಿದರು.

ಗಾಂಧೀಜಿಯವರ ಅನೇಕ ಸಾಮಾಜಿಕ ಆರ್ಥಿಕ ಮತ್ತು ಸಾಂಸ್ಕೃತಿಕ ಪ್ರಶ್ನೆಗಳನ್ನು ಕುರಿತು ಧೋರಣೆಗಳನ್ನು ನಾವು ಪ್ರತಿಗಾಮಿಯೆಂದೇ ಪರಿಗಣಿಸಬಹುದು. (ಅವುಗಳಲ್ಲಿ ಹೆಚ್ಚಿನವು ನಿಸ್ಸಂದೇಹವಾಗಿಯೂ ಪ್ರತಿಗಾಮಿಯಾದವು) ಆದರೆ ಗಾಂಧೀಜಿಯವರ ಈ 'ಪ್ರತಿಗಾಮಿ' ಧೋರಣೆಗಳೇ ಅವರು ರೈತಾಪಿಗಳು ಮತ್ತು ಆಗಿನ ರಾಷ್ಟ್ರೀಯ ಜನವಾದೀ ಚಳುವಳಿಯ ನಾಯಕರಾಗಿದ್ದ ಪ್ರತಿಷ್ಠಿತ ಜನರಿಗೂ ಮಧ್ಯೆ ಸಂಬಂಧ ಕಲ್ಪಿಸಲು ಸಾಧ್ಯವಾಗುವಂತೆ ಮಾಡಿತು. ಇದು ಸ್ವಯಂ ವೈರುಧ್ಯವುಳ್ಳ ಹೇಳಿಕೆಯಾಗಿ ಕಾಣಬಹುದು. ಗ್ರಾಮೀಣ ಜನಸಮೂಹವನ್ನು ರಾಷ್ಟ್ರೀಯ ಜನವಾದೀ ಚಳುವಳಿಯಲ್ಲಿ ಭಾಗವಹಿಸುವಂತೆ ಮಾಡಿ ಕ್ರಾಂತಿಕಾರೀ ಸನ್ನಿವೇಶವನ್ನು ಸೃಷ್ಟಿಸಲು ಗಾಂಧೀಜಿಯವರ ಈ ಪ್ರತಿಗಾಮಿ ಧೋರಣೆಗಳೇ ಪ್ರೇರಕಶಕ್ತಿಯಾಗಿದ್ದವು ಎಂದು ಯಾರಾದರೂ ಹೇಳುವುದು ಸ್ವಯಂ ವೈರುಧ್ಯವುಳ್ಳ ಹೇಳಿಕೆಯಾಗಿ ಕಾಣುತ್ತದೆ. ಆದರೆ ಈ ರೀತಿಯ ಸ್ವಯಂ ವೈರುಧ್ಯತೆ ನಮ್ಮ ರಾಷ್ಟ್ರದ ರಾಜಕೀಯ ಜೀವನದಲ್ಲಿನ ವೈರುಧ್ಯತೆಯಿಂದ ಹುಟ್ಟಿದ್ದೇ ಆಗಿದೆ. ರಾಷ್ಟ್ರೀಯ ಜನವಾದೀ ಚಳುವಳಿ (ಸ್ವಾತಂತ್ರ್ಯ ಚಳುವಳಿ)ಯನ್ನು ಬಂಡವಾಳಗಾರರು ಊಳಿಗಮಾನ್ಯ ಪ್ರಭುಗಳ ಜೊತೆಗೂಡಿ ನಡೆಸಿದ್ದರಿಂದ ರಾಜಕೀಯ ಜೀವನದಲ್ಲಿ ಈ ವೈರುಧ್ಯತೆಗೆ ಕಾರಣವಾಗಿದೆ.

ಮೂರನೆಯದಾಗಿ, ಹಳ್ಳಿಯ ಬಡಜನ ಸಮೂಹವನ್ನು ರಾಷ್ಟ್ರೀಯ ಚಳುವಳಿಯತ್ತ ಎಳೆಯುವುದರಲ್ಲಿ ಗಾಂಧೀಜಿ ಮಹತ್ತರ ಪಾತ್ರವನ್ನು ವಹಿಸಿದ್ದರು. ಮೊದಲನೆಯ ಮಹಾಯುದ್ಧದ ನಂತರ ಈ ಜನತೆ ತೋರಿದ ಪ್ರಚಂಡ ಜಾಗೃತಿಯ ಮನೋಭಾವಕ್ಕೆ ಗಾಂಧೀಜಿಯೇ ವೈಯಕ್ತೀವಾಗಿ ಕಾರಣರು ಎಂದು ಹೇಳುವುದು ತಪ್ಪಾಗುತ್ತದೆ. ಏಕೆಂದರೆ ಜನತೆಯಲ್ಲಿ ಉಂಟಾದ ಅಂತಹ ಜಾಗೃತ ಮನೋಭಾವ ಭಾರತದಲ್ಲಿ ಮತ್ತು ಪ್ರಪಂಚದ ಇತರ ಕಡೆಗಳಲ್ಲಿ ಆದ ಚಾರಿತ್ರಿಕ ಬೆಳವಣಿಗೆಯಿಂದ ಬಂದದ್ದು. ಭಾರತೀಯ ರೈತಾಪಿ ಜನರ ಆರ್ಥಿಕ ಪರಿಸ್ಥಿತಿ ನಿಧಾನವಾಗಿ ಆದರೆ ಸತತವಾಗಿ ಹಾಳಾಗುತ್ತಾ ಬಂದು ಮೊದಲನೆಯ ಯುದ್ಧದ ಕಾಲದಲ್ಲಿ ಅವರ ದುಃಸ್ಥಿತಿ ವಿಪರೀತಕ್ಕೆ ಹೋದದ್ದು; ರಾಷ್ಟ್ರೀಯ ಸ್ವಾತಂತ್ರ್ಯ ಚಳುವಳಿಯಲ್ಲಿ ತೀವ್ರಗಾಮಿ ಪಂಥವೊಂದು ಬೆಳೆದದ್ದು ಅದು ಹಲವು ಪ್ರದೇಶಗಳಲ್ಲಿ ರೈತಾಪಿ ಜನರ ಕೆಲವರ್ಗವನ್ನು ತಲುಪಿದ್ದು; ಟರ್ಕಿ ಚೈನಾ ಮತ್ತು ಇವೆಲ್ಲಕ್ಕಿಂತ ಹೆಚ್ಚಾಗಿ ರಷ್ಯಾದ ಕ್ರಾಂತಿ ಮುಂತಾದ ಅಂತ-ರಾಷ್ಟ್ರೀಯ ಬೆಳವಣಿಗೆಗಳು ವಿಷ್ಯಾದ ಜನತೆ ಜೀವನ ಹಾಗೂ ಮನಸ್ಸಿನ ಮೇಲೆ ಬೀರಿದ ಪರಿಣಾಮ ಇವೆಲ್ಲವೂ ಭಾರತೀಯ ರೈತಾಪಿ ಜನರ ಅರಿವನ್ನು ಹೆಚ್ಚಿಸಿದ್ದೇ ಅವರಲ್ಲಿ ಅಂತಹ ಜಾಗೃತ ಮನೋಭಾವಕ್ಕೆ ಮೂಲ ಕಾರಣವಾದವು. ಇವುಗಳು ಈಗಾದ

ರೀತಿಯಲ್ಲಿ ಪರಿಣಾಮ ಬೀರದಿದ್ದಿರಬಹುದು. ಆದರೆ ಗಾಂಧೀಜಿ ಹುಟ್ಟಿ ಬಂದು ಈ ರೀತಿ ಕೆಲಸ ಮಾಡದಿದ್ದರೂ ಆ ಕಾಲದ ಜನಸಮೂಹ ಅಷ್ಟೇ ತೀವ್ರವಾಗಿ ಪ್ರತಿಕ್ರಿಯಿಸುತ್ತಿದ್ದರು.

ಹೀಗೆ ಹೇಳುವುದೆಂದರೆ ಭಾರತೀಯ ರೈತಾಪಿ ಜನರ ಅರಿವನ್ನು ಗೊತ್ತಾದ ರೀತಿಯಲ್ಲಿ ರೂಪಿಸುವತ್ತ ಗಾಂಧೀಜಿ ಒಬ್ಬ ವ್ಯಕ್ತಿಯಾಗಿ ವಹಿಸಿದ ಪಾತ್ರವನ್ನು ನಿರಾಕರಿಸುವುದು ಎಂದು ಅರ್ಥವಲ್ಲ; ಬದಲು ಈ ಹೊಸ ಆಂದೋಳನ ಸ್ವಾತಂತ್ರ್ಯ ಮತ್ತು ಪ್ರಜಾಪ್ರಭುತ್ವಕ್ಕಾಗಿ ನಡೆದ ರಾಜಕೀಯ ಚಳುವಳಿಯೊಂದಿಗೆ ಕೊಂಡಿ ಕಟ್ಟಿಕೊಂಡಿತು ಎಂದು ಹೇಳುವುದಾಗಿದೆ. ರಾಷ್ಟ್ರೀಯ ಪ್ರಜಾಪ್ರಭುತ್ವವಾದೀ ಚಳುವಳಿಯನ್ನು ಬಲಪಡಿಸಲು ಹಳ್ಳಿಯ ಬಡಜನರು ಅದರಲ್ಲಿ ಭಾಗವಹಿಸುವಂತೆ ಮಾಡಿದ ಗಾಂಧೀಜಿಯವರ ಪಾತ್ರವನ್ನು ನಿರಾಕರಿಸುವುದು ಹೇಗೆ ಪಕ್ಷಪಾತದೃಷ್ಟಿಯೆನಿಸುತ್ತದೆಯೊ ಹಾಗೇ ಜನಸಮೂಹದಲ್ಲಿ ಮೂಡಿದ ಅರಿವಿಗೆಲ್ಲಾ ಗಾಂಧೀಜಿಯೇ ಕಾರಣರು ಎಂದು ಹೇಳುವುದು ಅಷ್ಟೇ ಪಕ್ಷಪಾತದೃಷ್ಟಿ ಆಗುತ್ತದೆ.

ನಾಲ್ಕನೆಯದಾಗಿ; ಅದುವರೆಗೆ ಅಸಂಘಟಿತರಾಗಿದ್ದ ಹಳ್ಳಿಯ ಬಡವರನ್ನು ಹೆಚ್ಚಿನಪ್ರಮಾಣದಲ್ಲಿ ರಾಷ್ಟ್ರೀಯ ಪ್ರಜಾಪ್ರಭುತ್ವವಾದೀ ಚಳುವಳಿ (ಸ್ವಾತಂತ್ರ್ಯ ಚಳುವಳಿ) ಯಲ್ಲಿ ಭಾಗವಹಿಸುವಂತೆ ಮಾಡುವುದರ ಮೂಲಕ ಚಳುವಳಿ ತನ್ನೆಲ್ಲಾ ದೌರ್ಬಲ್ಯಗಳನ್ನು ಕಳೆದುಕೊಂಡು ಅದು ರಾಷ್ಟ್ರದ ಎಲ್ಲಾ ವರ್ಗಗಳ ಜನರನ್ನೂ ಕೂಡಿ ನಿಜಕ್ಕೂ ರಾಷ್ಟ್ರೀಯ ಚಳುವಳಿಯಾಗಿ ಮಾರ್ಪಡಿಸುವಲ್ಲಿ ಗಾಂಧೀಜಿಯವರು ವಹಿಸಿದ ಪಾತ್ರಕ್ಕೆ ಅವರು ಅಭಿನಂದನಾರ್ಹರಾಗುತ್ತಾರೆ. ಆದರೆ ಇಡೀ ಹಳ್ಳಿಯ ಬಡಜನರು ಒಂದು ಸ್ವತಂತ್ರ ಶಕ್ತಿಯಾಗಿ ಕಾರ್ಯಾಚರಣೆಗೆ ಇಳಿಯುವುದರ ಬಗ್ಗೆ ಗಾಂಧೀಜಿ ಯಾವಾಗಲೂ, ತಮ್ಮ ಜೀವನದ ಕೊನೆಯವರೆಗೂ ಹೆದರಿಕೊಳ್ಳುತ್ತಲೇ ಇದ್ದರು ಎಂಬುದನ್ನು ಮರೆಯಬಾರದು. ಸ್ವಾತಂತ್ರ್ಯ ಮತ್ತು ಪ್ರಜಾಪ್ರಭುತ್ವಕ್ಕಾಗಿ ನಡೆದ ಹೋರಾಟದಲ್ಲಿ ಭಾಗವಹಿಸುವಂತೆ ಈ ಬಡಜನರನ್ನು ಸಂಘಟಿಸುವುದರಲ್ಲಿ ಗಾಂಧೀಜಿ ಆಸಕ್ತಿ ತೋರಿದರೂ ಅವರು ತಮ್ಮ ವರ್ಗವಾದ ಬಂಡವಾಳಗಾರರ ನಾಯಕತ್ವದಲ್ಲಿಯೇ ಸ್ವಾತಂತ್ರ್ಯಹೋರಾಟ ನಡೆಯಬೇಕೆಂಬುದರಲ್ಲಿ ತುಂಬಾ ಎಚ್ಚರಿಕೆ ವಹಿಸಿದ್ದರು.

ಚೌರಿ-ಚೌರಾ ಘಟನೆಯಷ್ಟು ಮೇಲಂತೂ ಸ್ವಾತಂತ್ರ್ಯ ಮತ್ತು ಪ್ರಜಾಪ್ರಭುತ್ವಕ್ಕಾಗಿ ನಡೆದ ಹೋರಾಟದ ಪ್ರತಿಯೊಂದು ಹಂತದಲ್ಲಿಯೂ ಬಂಡವಾಳಗಾರರ ನಾಯಕತ್ವಕ್ಕೆ ಧಕ್ಕೆ ಬಾರದ ರೀತಿಯಲ್ಲಿ ಹಳ್ಳಿಯ ಬಡಜನರು ಹೋರಾಟದಲ್ಲಿ ತೊಡಗಲು ಬೇಕಾದಷ್ಟು ಎಲ್ಲಾ ಕ್ರಮಗಳನ್ನು ಗಾಂಧೀಜಿ ಕೈಗೊಂಡರು. ಈ ಸತ್ಯ ಸಂಗತಿಯನ್ನು ಅರ್ಥಮಾಡಿಕೊಳ್ಳಲು ಯಾರಾದರೂ ವಿಫಲರಾದರೆ ಅವರಿಗೆ, ಮೊದಲನೆ ಮಹಾಯುದ್ಧದ ಕಾಲದಲ್ಲಿ ಯಾವ ಸಂಕ್ಲೇಶವೂ ಇಲ್ಲದೆ ಸಾಮ್ರಾಜ್ಯಶಾಹಿಗಳ ಸೈನ್ಯಕ್ಕೆ ಜನರನ್ನು ಭರ್ತಿಮಾಡುತ್ತಿದ್ದ ಗಾಂಧೀಜೀ, ಜನರನ್ನು ಬ್ರಿಟಿಷರ ಮತ್ತವರ ದಳ್ಳಾಳಿಗಳ ವಿರುದ್ಧ ನಡೆದ ಜನತಾ ಹೋರಾಟ ಅಹಿಂಸಾತ್ಮಕವಾಗಿರಬೇಕೆಂದು, ಏಕೆ ಒತ್ತಾಯಿಸಿದರು ಎಂಬುದನ್ನ ವಿವರಿಸಲು ವಿಫಲರಾಗುತ್ತಾರೆ.

ಐದನೆಯದಾಗಿ, ಹಳ್ಳಿಯ ಬಡಜನರ ಸಂಬಂಧದಲ್ಲಿ ಮಾತ್ರವಲ್ಲದೆ ಕಾರ್ಮಿಕವರ್ಗ ಮತ್ತಿತರ ದುಡಿಯುವ ಜನರ ಸಂಬಂಧದಲ್ಲೂ ಗಾಂಧೀಜಿಯ ನಡಾವಳಿ ವಾಸ್ತವದಲ್ಲಿ ಬಂಡವಾಳಗಾರರಿಗೆ ಸಹಾಯ ಮಾಡುವಂಥ ಕಾರ್ಯಾಚರಣೆಯೇ ಆಗಿತ್ತು. ಅವರ ಧರ್ಮದರ್ಶಿತ್ವದ ಸಿದ್ಧಾಂತ, ಯಾವುದೇ ರಾಜಕೀಯ ಚಟುವಟಿಕೆಯಲ್ಲಿ ಕೆಲವು ನೈತಿಕ ಮೌಲ್ಯಗಳನ್ನು ಮಾರ್ಗದರ್ಶಿಯಾಗಿ ಇಟ್ಟುಕೊಳ್ಳಬೇಕೆಂದು ಒತ್ತಾಯ ಮಾಡಿದ ರೀತಿ, ತಮ್ಮ ಸಂಸತ್ತೇತರ ಚಟುವಟಿಕೆಗಳನ್ನು (ರಚನಾತ್ಮಕ ಕಾರ್ಯಕ್ರಮ ಮತ್ತು ಸತ್ಯಾಗ್ರಹ ಮುಂತಾದವುಗಳನ್ನು) ತಮ್ಮ ನಂಬಿಗಸ್ಥ ಅನುಯಾಯಿಗಳು ಸಂಸದೀಯ ಚಟುವಟಿಕೆಗಳೊಂದಿಗೆ ಹೊಂದಿಸಿದ ಜಾಣ್ಮೆಯ ವಿಧಾನ, ಶತ್ರುವಿನ ವಿರುದ್ಧ ನೇರ ಹೋರಾಟದಲ್ಲಿ ತೊಡಗಿದ್ದಾಗಲೂ ಅವನೊಡನೆ ಸಂಧಾನ ವ್ಯವಹಾರ ನಡೆಸುವ ವಿಶಿಷ್ಟ ಗಾಂಧೀ ವಿಧಾನ ಮುಂತಾದುವು ನಿಜ ಕಾರ್ಯಾಚರಣೆಯಲ್ಲಿ ಬಂಡವಾಳಗಾರರಿಗೆ ಅನೇಕ ರೀತಿಯಲ್ಲಿ ಸಹಾಯ ಮಾಡಿತು. ಒಂದು, ಜನಸಮೂಹವನ್ನು ಸಾಮ್ರಾಜ್ಯಶಾಹಿಯ ವಿರುದ್ಧದ ಹೋರಾಟಕ್ಕೆ ಪ್ರೇರೇಪಿಸುವುದು; ಎರಡು, ಆದರೆ ಅದೇ ಜನರು ಹೋರಾಟವನ್ನು ಕ್ರಾಂತಿಕಾರೀ ಮಾರ್ಗದಲ್ಲಿ ತೆಗೆದುಕೊಂಡು ಹೋಗದಂತೆ ತಡೆಯುವುದರಲ್ಲಿ ಗಾಂಧೀಜಿಯವರ ಕಾರ್ಯಕ್ರಮಗಳು ಬಂಡವಾಳಗಾರರಿಗೆ ಸಹಾಯ ಮಾಡಿದವು. ಜನರನ್ನು ಹೋರಾಟಕ್ಕಿಳಿಯುವಂತೆ ಪ್ರೇರೇಪಿಸುವುದು ಅದೇ ಸಮಯದಲ್ಲಿ ಸಾಮ್ರಾಜ್ಯಶಾಹೀ ವಿರೋಧಿ ಹೋರಾಟದಲ್ಲಿ ನೇರವಾಗಿ ಭಾಗವಹಿಸದಂತೆ ತಡೆಯುವುದು ಜತೆ ಜತೆಗೇ ಸಾಮ್ರಾಜ್ಯಶಾಹಿ ಪ್ರಭುಗಳೊಂದಿಗೆ ಸಂಧಾನಕ್ಕೆ ಏರ್ಪಡಿಸುವುದು ಮುಂತಾದ ವಿಶಿಷ್ಟ ಸಾಮರ್ಥ್ಯದಿಂದಾಗಿ ಗಾಂಧೀಜಿಯವರು ಬಂಡವಾಳಗಾರರ ವಿವಾದಾತೀತ ನಾಯಕನಾಗುವಂತೆ ಮಾಡಿತು. ಬಂಡವಾಳಶಾಹಿ ವರ್ಗದಲ್ಲಿನ ಎಲ್ಲಾ ವಿಭಾಗಗಳು ಮತ್ತು ಬಣಗಳು ಗಾಂಧೀಜೀಯವರಲ್ಲಿ ವಿಶ್ವಾಸವಿಟ್ಟುಕೊಂಡಿದ್ದರಿಂದ ಅವರನ್ನು ಒಟ್ಟುಮಾಡಿ ಕಾರ್ಯರಂಗಕ್ಕಿಳಿಸುವುದು ಗಾಂಧೀಜಿಯವರಿಗೆ ಸಾಧ್ಯವಾಯಿತು.

ಕೊನೆಯದಾಗಿ ಬಂಡವಾಳಗಾರರ ಅಗ್ರಗಣ್ಯನಾಯಕರಾಗಿ ಗಾಂಧೀಜಿ ಇತಿಹಾಸದಲ್ಲಿ ವಹಿಸಿದ ಪಾತ್ರವನ್ನು ಅವರು ಯಾವಾಗಲೂ ಎಲ್ಲಾ ವಿಷಯಗಳಲ್ಲೂ ಬಂಡವಾಳಗಾರರ ಪರವಾಗಿಯೇ ಇದ್ದರು ಎಂಬ ಅರ್ಥದಲ್ಲಿ ತೆಗೆದುಕೊಳ್ಳಬಾರದು. ಮತ್ತು ಅವರು ಯಾವ ವರ್ಗಕ್ಕೆ ಸ್ನೇಹಿತರಾಗಿ ಇದ್ದರೂ ಆ ವರ್ಗದ ಸ್ವಭಾವವಾದಿತ್ತು ಎಂದು ತಿಳಿದಾಗ ಅನೇಕ ಸಂದರ್ಭಗಳಲ್ಲಿ ಮತ್ತು ಅನೇಕ ವಿಷಯಗಳಲ್ಲಿ ಗಾಂಧೀಜಿಯ ಅಭಿಪ್ರಾಯ ಒಂಟಿ ಅಭಿಪ್ರಾಯವಾಗದಿದ್ದರೂ ಅಲ್ಪ ಗುಂಪಿನ ಅಭಿಪ್ರಾಯವಾಗುತ್ತಿದ್ದುದು; ಅವರ ಮತ್ತು ಅವರು ಯಾವ ವರ್ಗಕ್ಕೆ ಸ್ನೇಹಿತ, ದಾರ್ಶನಿಕ ಹಾಗೂ ಮಾರ್ಗದರ್ಶಿಯಾಗಿದ್ದರೋ ಆ ವರ್ಗದ ಸ್ವಭಾವವೇ ಆಗಿತ್ತು. ಅಂತಹ ಎಲ್ಲಾ ಸಂದರ್ಭಗಳಲ್ಲೂ ಗಾಂಧೀಜಿ ಮತ್ತು ಅವರ ಸ್ನೇಹವರ್ಗದವರು ತಾತ್ಕಾಲಿಕವಾಗಿ ಬೇರೆ ಬೇರೆ ದಾರಿಯಲ್ಲಿ ಹೋಗುವುದಕ್ಕೆ ಪರಸ್ಪರ ಒಪ್ಪಿಕೊಳ್ಳುತ್ತಿದ್ದರು. ಇಂತಹ ಸನ್ನಿವೇಶ ಆಗಿಂದಾಗ್ಗೆ ಕಾಣಸಿಕೊಳ್ಳುತ್ತಿದ್ದವು.

ಮೊದಲನೆಯದಾಗಿ, ಅಸಹಕಾರ ಚಳುವಳಿಯ ಕಾಲದಲ್ಲಿ ಸ್ವರಾಜ್ಯವಾದಿಗಳಿಗೂ ಬದಲಾವಣೆಗೊಪ್ಪದವರಿಗೂ ನಡುವೆ ಆದ ಶ್ರಮ ವಿಭಜನೆ. ಅನಂತರ 1932-33ರಲ್ಲಿ ನಡೆದ ಸವಿನಯ ಕಾಯಿದೆ ಭಂಗ (Civil disobedience) ಚಳುವಳಿಯ ಕಾಲದಲ್ಲಿ ಆಮೇಲೆ ಎರಡನೆಯ ಮಹಾಯುದ್ಧದ ಕಾಲದಲ್ಲಿ ಅನೇಕ ವೇಳೆ, ಸ್ವಾತಂತ್ರ್ಯ ಪಡೆದ ನಂತರದ ತಿಂಗಳುಗಳಲ್ಲಿ ಇಂತಹ ಸನ್ನಿವೇಶ ಆಗಿಂದಾಗ್ಗೆ ಕಾಣಿಸಿಕೊಳ್ಳುತ್ತಿದ್ದವು.

ಗಾಂಧೀಜಿಯವರ ಕೊನೆಯ ದಿನಗಳಲ್ಲಂತೂ ಇದು ಸತ್ಯವಾಗಿಯೇ ಇತ್ತು. ಅವರ ಆದರ್ಶವಾದವು "ಉಕ್ಕು ಹೃದಯದ" ಸರ್ದಾರ್ ಪಟೇಲರ "ಕಠಿಣ ಕಾರ್ಯಾಚರಣವಾದ"ದೊಂದಿಗೆ ಘರ್ಷಣೆಗಿಳಿದಾಗ, ಅವರ ಆದರ್ಶವಾದವು ತೀವ್ರಗಾಮೀ ಬುದ್ಧಿಜೀವಿ ನೆಹರೂರವರ ಆಧುನಿಕವಾದದೊಂದಿಗೆ ಘರ್ಷಣೆಗಿಳಿದಾಗ ಮತ್ತು ಇದೇ ರೀತಿ ಬಹಳ ವರ್ಷಗಳವರೆಗೆ ಅವರ ಜೊತೆಗಾರರೂ ಹಾಗೂ ಅನುಯಾಯಿಗಳೂ ಆಗಿದ್ದ ಅನೇಕರೊಡನೆ ಘರ್ಷಣೆ ತೋರಿದಾಗ ಗಾಂಧೀಜಿ ಮತ್ತು ಅವರ ಅನುಯಾಯಿಗಳು ತಾತ್ಕಾಲಿಕವಾಗಿ ತಮ್ಮದೇ ಆದ ದಾರಿಗಳನ್ನು ಆರಿಸಿಕೊಂಡ ಸನ್ನಿವೇಶ ಕಂಡುಬಂದವು. ಈ ರೀತಿ ಗಾಂಧೀಜಿಯ ಮತ್ತು ಅವರ ಅನುಯಾಯಿಗಳ ನಡುವೆ ಬೆಳೆದ ಕಂದರದಿಂದಾಗಿ ಸ್ವಾತಂತ್ರ್ಯೋತ್ತರ ತಿಂಗಳುಗಳಲ್ಲಿ ಅಂದರೆ ಅವರ ಜೀವನಕ್ಕೆ ಮುಕ್ತಾಯ ಹಾಡಿದ ದುರಂತ ಘಟನೆ ನಡೆದ ಎಷ್ಟೋ ತಿಂಗಳುಗಳ ಮುನ್ನವೇ ಅವರ ಜೀವನ ದುರಂತಕ್ಕೊಳಗಾಗಿತ್ತು.

ಅವರ ಜೀವನದ ಕೊನೆಯ ದಿನಗಳ ಗಾಂಧೀಜಿ ಮತ್ತು ಅವರ ಸಹೋದ್ಯೋಗಿಗಳ ನಡುವೆ ಉಂಟಾದ ಕಂದಕ ದೊಡ್ಡದಾಗುತ್ತಿದ್ದುದನ್ನು ನಾವು ಪರಿಶೀಲಿಸಿದಾಗ ನಾವು ಗಾಂಧೀಜಿಯ ಬಗ್ಗೆ, ಆ ವ್ಯಕ್ತಿ ಮತ್ತು ಅವರ ಧ್ಯೇಯೋದ್ದೇಶದ ಬಗ್ಗೆ ನಿಜವಾದ ವಸ್ತುನಿಷ್ಠವಾದ ಸಮಗ್ರತೆಯಿಂದ ಕೂಡಿದ ತಿಳುವಳಿಕೆಯನ್ನು ಪಡೆಯುತ್ತೇವೆ. ವಾಸ್ತವದಲ್ಲಿ ಗಾಂಧೀಜಿ ಕೆಲವು ನೈತಿಕ ಮೌಲ್ಯಗಳಿಗೆ ಬದ್ಧರಾಗಿರಬೇಕೆಂದು ಒತ್ತಾಯ ಪಡಿಸಿದ್ದು ಅವರಿಗೂ ಅವರ ಸಹವರ್ತಿಗಳಿಗೂ ಮಧ್ಯೆ ಭಿನ್ನಾಭಿಪ್ರಾಯ ಹೊರಹೊಮ್ಮಲು ಕಾರಣವಾಯಿತು. ಏಕೆಂದರೆ ಪ್ರಾರಂಭದಲ್ಲಿ ಗಾಂಧೀಜಿ ಒತ್ತಾಯಿಸಿದ ನೈತಿಕ ಮೌಲ್ಯಗಳ ಆಚರಣೆ ಬಂಡವಾಳಗಾರರ ಬೆಳವಣಿಗೆಗೆ ಸಹಾಯಕವಾಗಿಯೇ ಇತ್ತು. ಆದರೆ ಗಾಂಧೀಜಿಯವರ ಕೊನೆಯ ದಿನಗಳಲ್ಲಿ ಅಂದರೆ ಸ್ವಾತಂತ್ರ್ಯೋತ್ತರದ ತತ್‌ಕ್ಷಣದ ತಿಂಗಳುಗಳಲ್ಲಿ ಅಂತಹ ನೈತಿಕ ಮೌಲ್ಯಗಳು ಬಂಡವಾಳಗಾರರಿಗೆ ತೊಡಕಾಗುತ್ತಾ ಬಂತು. ಇದೇ ಅವರಿಬ್ಬರ ನಡುವೆ ಬಿರುಕು ಹೆಚ್ಚಾಗಲು ಕಾರಣವಾಯಿತು.

ಸ್ವಾತಂತ್ರ್ಯಪೂರ್ವ ದಿನಗಳಲ್ಲಿ ಬಂಡವಾಳಗಾರರು ಎರಡು ರಂಗಗಳಲ್ಲಿ ಹೊಡೆದಾಡಬೇಕಿತ್ತು. ಒಂದು ಸಾಮ್ರಾಜ್ಯಶಾಹಿಯ ವಿರುದ್ಧದ ಹೋರಾಟ. ಇದಕ್ಕೆ ಅವರಿಗೆ ನಗರ ಹಾಗೂ ಗ್ರಾಮೀಣ ಬಡಜನರು ಭಾಗವಹಿಸುವುದು ಬೇಕಿತ್ತು. ಎರಡು: ಆದರೆ, ಇದೇ ಸಮಯದಲ್ಲಿ ಜನಸಮೂಹದಲ್ಲಿ ಬೆಳೆಯುತ್ತಿದ್ದ ಕ್ರಾಂತಿಕಾರೀ ಕಾರ್ಯಾಚರಣೆಯ ವಿರುದ್ಧವೂ ಬಂಡವಾಳಗಾರರು ಹೋರಾಡಬೇಕಿತ್ತು. ಇವೆರಡನ್ನೂ ಸಾಧಿಸಲು ಗಾಂಧೀಜಿ ರೂಪಿಸಿದ ಅಹಿಂಸಾತ್ಮಕ ಪ್ರತಿಭಟನೆಯ ತಂತ್ರ ಬಂಡವಾಳಗಾರರಿಗೆ ತುಂಬಾ ಸಹಕಾರಿಯಾಗಿ ಕಂಡಿತು. ಆದರೆ ಯಾವಾಗ ಸಾಮ್ರಾಜ್ಯಶಾಹಿಯ ವಿರುದ್ಧದ ಹೋರಾಟ ಯಶಸ್ವಿಯಾಯಿತೊ ಅಂದರೆ ಬಂಡವಾಳಗಾರರ ಮತ್ತು ಅದರ ವರ್ಗಬಂಧುಗಳ ಕೈಗೆ ರಾಜ್ಯಾಧಿಕಾರ ಸಿಕ್ಕಿತೊ ಆವಾಗ ಎರಡು ರಂಗಗಳಲ್ಲಿ ಹೋರಾಟ ನಡೆಸುವುದು ಬಂಡವಾಳಗಾರರಿಗೆ ಅನವಶ್ಯಕವಾಯಿತು. ಇನ್ನೂ ಸಾಮ್ರಾಜ್ಯಶಾಹಿಗಳ ವಿರುದ್ಧ ಮಾಡಬೇಕಾಗಿದ್ದ ಹೋರಾಟ ಸರಕಾರದ ಮಟ್ಟದಲ್ಲಾದ್ದರಿಂದ ಜನಸಮೂಹವನ್ನು ಅಂತಹ ಹೋರಾಟಕ್ಕಿಳಿಸುವುದು ಅನವಶ್ಯಕವಾಯಿತು.

ಬಂಡವಾಳಗಾರರ ಕೈಗೆ ರಾಜ್ಯಾಧಿಕಾರ ಬಂದದ್ದು ಮತ್ತು ಆ ರಾಜ್ಯಾಧಿಕಾರವನ್ನು ತನ್ನ ವರ್ಗಹಿತಾಸಕ್ತಿಗಳಿಗಾಗಿ ಅದು ಉಪಯೋಗಿಸಿಕೊಳ್ಳಬೇಕಾದದ್ದು, ಅದು ತನ್ನ ಹಿಡಿತದಲ್ಲಿದ್ದ ರಾಜ್ಯಯಂತ್ರವನ್ನು ಜನಸಮೂಹದೊಂದಿಗೆ ಹೆಚ್ಚೆಚ್ಚು ಘರ್ಷಣೆಗಿಳಿಯುವಂತೆ ಮಾಡಿಕೊಟ್ಟಿತು. ಬಂಡವಾಳಗಾರರು ರಾಜ್ಯಾಧಿಕಾರಕ್ಕೆ ಬಂದದ್ದರ ಇನ್ನೊಂದು ಪರಿಣಾಮವೆಂದರೆ ಅವರ ಪ್ರತಿನಿಧಿಗಳು (ಮಂತ್ರಿಗಳು, ಸಂಸತ್ ಹಾಗೂ ವಿಧಾನಸಭೆ ಸದಸ್ಯರು) ರಾಜ್ಯದ ಹಾಗೂ ಜನರ ವೆಚ್ಚದಲ್ಲಿ ತಮ್ಮನ್ನು ತಮ್ಮ ಬಂಧುಬಾಂಧವರನ್ನು ಸಿರಿವಂತರನ್ನಾಗಿ ಮಾಡಿಕೊಳ್ಳತೊಡಗಿದ್ದು. ಇದಕ್ಕಾಗಿ ಅವರು ಎಲ್ಲಾ ರೀತಿಯ ಭ್ರಷ್ಟ ವಿಧಾನಗಳಿಗೂ ಇಳಿಯುವಂತೆ ಅನುವು ಮಾಡಿಕೊಟ್ಟಿತು.

ಹೀಗೆ ಬಂಡವಾಳಗಾರರು ಮತ್ತು ಅದರ ಪ್ರತಿನಿಧಿಗಳಲ್ಲಿ ಉಂಟಾದ ಸ್ಥಾನ ಬದಲಾವಣೆ ಮತ್ತು ಅವರೊಂದು ವರ್ಗವಾಗಿ ಬೆಳೆದದ್ದು ಅವರಿಗೂ ಗಾಂಧೀಜಿಗೂ ಘರ್ಷಣೆಯನ್ನು ತಂದಿತು. ಏಕೆಂದರೆ ಗಾಂಧೀಜಿ ತಾವು ಸಾಮ್ರಾಜ್ಯಶಾಹಿವಿರೋಧಿ ಹೋರಾಟ ಕಾಲದಿಂದಲೂ ಬೋಧಿಸಿದ ಆದರ್ಶಗಳಿಗೇ ಈಗಲೂ ಅಂಟಿಕೊಂಡಿದ್ದರಿಂದ ಬಂಡವಾಳಗಾರರಿಗೆ ಅದು ಕಷ್ಟಕರವಾಗಿ ಕಂಡಿದ್ದಲ್ಲದೆ ಅವರ ಬೆಳವಣಿಗೆಗೆ ತೊಡಕಾಗಿ ಪರಿಣಮಿಸಿತು. ಗಾಂಧೀಜಿ ಮಾತ್ರ ಅವುಗಳಿಗೆ ನಿಷ್ಠರಾಗಿಯೇ ಉಳಿದುಕೊಂಡರು ಮತ್ತು ಅವರ ಮೊದಲಸಹವರ್ತಿಗಳು ಹಾಗೂ ನಂಬಿಗಸ್ತ ಮುಂದಾಳುಗಳಲ್ಲಿ ಉಂಟಾದ ಹಠಾತ್ ಬದಲಾವಣೆಯೊಂದಿಗೆ ಹೊಂದಿಕೊಳ್ಳಲಾಗಲಿಲ್ಲ. ಅದರಲ್ಲೂ ಹಿಂದೂ ಮುಸ್ಲಿಂ ಒಗ್ಗಟ್ಟಿನ ಪ್ರಶ್ನೆಯ ಸಂಬಂಧದಲ್ಲಿ ಮತ್ತು ಕಾಂಗ್ರೆಸ್‌ನ ಕಾರ್ಯಕರ್ತರ ಭ್ರಷ್ಟಾಚಾರದ ವಿಷಯಗಳಲ್ಲಿ ಭಿನ್ನಾಭಿಪ್ರಾಯ ಹೆಚ್ಚು ಸ್ಪಷ್ಟವಾಯಿತು. ಇದರಿಂದ ಘರ್ಷಣೆ ಅನಿವಾರ್ಯವಾಯಿತು.

ಸಾಮ್ರಾಜ್ಯಶಾಹಿ ವಿರೋಧಿ ಹೋರಾಟದಲ್ಲಿ ಗಾಂಧೀಜಿಯವರು ಬೋಧಿಸಿ ಕಟ್ಟುಬಿದ್ದ ಆದರ್ಶವಾದ ಆಗಿನ ಬಂಡವಾಳಗಾರರಿಗೆ ತುಂಬಾ ಉಪಯೋಗಕಾರಿ ರಾಜಕೀಯ ಆಯುಧವಾಗಿ ಪರಿಣಮಿಸಿದುದರ ಏಕೈಕ ಕಾರಣಕ್ಕಾಗಿ ಗಾಂಧೀಜಿಯು ರಾಷ್ಟ್ರಪಿತರಾಗಿ ಹೋದರು. ಸ್ವಾತಂತ್ರ್ಯಪೂರ್ವ ದಿನಗಳಲ್ಲಿ ಅವರ ಆದರ್ಶವಾದ ಬಂಡವಾಳಗಾರರ ಹಿತಾಸಕ್ತಿಗಳಿಗೆ ತೊಡಕಾಗಿ ಪರಿಣಮಿಸಿದ್ದರಿಂದ ಗಾಂಧೀಜಿ ಮೂಲೆಗುಂಪಾಗಿ ಹೋದರು ಎಂದು ಹೇಳುವುದರ ಮೂಲಕ ಈ ಲೇಖನವನ್ನು ಮುಕ್ತಾಯಗೊಳಿಸಬಹುದು.

("ಒಡನಾಡಿ"ಯ ಸೌಜನ್ಯ)

—ಕನ್ನಡಕ್ಕೆ : ಯು.ಬಿ. ರಾಜಾರಾಂ

ಪತ್ರಿಕಾಲಯ ಮೇಲಿನ ಧಾಳಿಯ ಖಂಡನೆ

ಸಿ. ಪಿ. ಐ. (ಎಂ) ತಿಪಟೂರು ಶಾಖೆಯು 29-9-80ರಂದು ಸಭೆ ಸೇರಿ ಇತ್ತೀಚೆಗೆ ಬೆಂಗಳೂರಲ್ಲಿ ಪತ್ರಿಕಾಲಯ ಕಛೇರಿಗಳನ್ನು ನುಗ್ಗಿ ಯುವ ಕಾಂಗ್ರೆಸ್ ಕಾರ್ಯಕರ್ತರು ನಡೆಸಿದ ಧಾಳಿಯನ್ನು ಉಗ್ರವಾಗಿ ಖಂಡಿಸಲಾಯಿತು. ಇದಕ್ಕೆ ಮೊದಲು ಒಂದು ಮೌನಪ್ರದರ್ಶನ ನಡೆಸಲಾಯಿತು. ಕಾಂ. ಆರ್.ಎಸ್. ಚನ್ನಬಸವಣ್ಣ, ಕಾಂ. ಬಿ.ಡಿ. ರಾಮಯ್ಯ, ಕಾಂ. ಎಚ್. ಸಿ. ಚೆನ್ನಪ್ಪ, ರೈತಸಂಘದ ತಾಲ್ಲೂಕು ಸಮಿತಿ ಅಧ್ಯಕ್ಷ ಕಾಂ. ಎಂ. ಆರ್. ತೋಪೇ ಗೌಡ, ಕಾಂಗ್ರೆಸ್(ಯು)ವಿನ ಶ್ರೀ ಯು. ಜಿ. ಚಕ್ರವರ್ತಿ, ನಾಗರಾಜ್, ಶಂಕರಪ್ಪ, ಎಚ್. ಸಿದ್ರಾಮಯ್ಯ, ಮೊದಲಾದವರು ಭಾಗವಹಿಸಿದ್ದರು.

ಶೋಷಿತ ಸಮಾಜ ವ್ಯವಸ್ಥೆಯೊಡ್ಡಿರುವ ಸಮಸ್ಯೆಗಳ ಬಗ್ಗೆ ಗಂಭೀರ ವಿಮರ್ಶೆ

ಕೋಟೇಶ್ವರ ಗ್ರಾಮದಲ್ಲಿ ವಿಚಾರಗೋಷ್ಠಿ

ದ. ಕ. ಜಿಲ್ಲೆಯ ಕುಂದಾಪುರ ತಾಲ್ಲೂಕಿನ ಕೋಟೇಶ್ವರ ಗ್ರಾಮದಲ್ಲಿ ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್. ಎಫ್. ಐ.) ಮತ್ತು ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿ. ವೈ. ಒ.) ಆಶ್ರಯದಲ್ಲಿ ಯಶಸ್ವೀ ವಿಚಾರಗೋಷ್ಠಿಯೊಂದು ದಿನಾಂಕ ೨೮-೯-೧೯೮೦ರಂದು ನಡೆಯಿತು. ಸಭಿಕರಿಂದ ಕಿಕ್ಕಿರಿದು ತುಂಬಿದ್ದ ಗೋಷ್ಠಿಯಲ್ಲಿ ಹಲವಾರು ವಿಚಾರಗಳ ಬಗ್ಗೆ ಪ್ರಬಂಧ ಮಂಡಿಸಿ ಚರ್ಚಿಸಲಾಯಿತು.

"ಅಸ್ಸಾಂನಲ್ಲಿ ನಡೆಯುತ್ತಿರುವ ಚಳವಳಿ ಅಪ್ಪಟ ಪ್ರತ್ಯೇಕತಾವಾದಿ ಧೋರಣೆಯದು. ಅಲ್ಲಿ ವಿದೇಶಿಯರನ್ನು ಓಡಿಸುವ ನೆಪದಲ್ಲಿ ದೇಶಿಯರೇ ಆದ ಭಾಷಾ ಮತ್ತು ಮತೀಯ ಅಲ್ಪಸಂಖ್ಯಾತರು ಸೇರಿದಂತೆ ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳ ಮೇಲೆ ದಾಳಿ ದಬ್ಬಾಳಿಕೆ ನಡೆಯುತ್ತಿದೆ. ಈ ವಿಚ್ಛಿದ್ರಕಾರಿ ಶಕ್ತಿಗಳ ವಿರುದ್ಧ ಪ್ರತಿಭಟಿಸಲು ಮತ್ತು ರಾಷ್ಟ್ರದ ಐಕ್ಯತೆಯ ರಕ್ಷಣೆಗಾಗಿ ದೇಶದ ಎಲ್ಲೆಡೆ ಜನತೆ ಹೋರಾಡುವುದರೊಂದಿಗೆ ರಾಜ್ಯ ಸರಕಾರಗಳಿಗೆ ಹೆಚ್ಚಿನ ಅಧಿಕಾರ ನೀಡುವಂತೆ ಕೇಂದ್ರ ಸರಕಾರವನ್ನು ಒತ್ತಾಯಿಸಬೇಕು" ಎಂದು "ಅಸ್ಸಾಂ ಚಳವಳಿ ಏನು? ಎತ್ತ?" ಎಂಬ ವಿಷಯದ ಬಗ್ಗೆ ಪ್ರಬಂಧ ಮಂಡಿಸಿದ ಶ್ರೀ ರಘುರಾಮ ಶೆಟ್ಟಿ ಅಭಿಪ್ರಾಯ ಪಟ್ಟರು.

"ದಲಿತ ಜನಾಂಗದ ಸ್ಥಿತಿಗತಿ" ಯ ಬಗ್ಗೆ ಪ್ರಬಂಧ ಮಂಡಿಸಿದ ಶ್ರೀ ಗೋವಿಂದರವರು "ನಮ್ಮ ದೇಶದಲ್ಲಿ ದಲಿತರನ್ನು ಸಾಮಾಜಿಕವಾದಿ ಮತ್ತು ಆರ್ಥಿಕವಾಗಿ ಸಾವಿರಾರು ವರ್ಷಗಳಿಂದ ತುಳಿಯಲಾಗಿದೆ. ಒಳ್ಳೆಯ ಹೆಸರನ್ನು ಕೂಡ ಇಡದ ಅನಾಗರಿಕ ಸ್ಥಿತಿ ಇವರದ್ದು. ದೇಶದ ನಿಜವಾದ ಶ್ರಮಜೀವಿ ವರ್ಗವಾದ ದಲಿತ ಜನಾಂಗ ನಾಯಿಗಳೊಡನೆ ಎಂಜಲೆಲೆಗಾಗಿ ಇಂದೂ ಕೂಡ ಕಚ್ಚಾಡುತ್ತಿರುವುದು ಕ್ರೂರ ವ್ಯವಸ್ಥೆಯ ವಿಪರ್ಯಾಸ. ಕಲ್ಲುಗಳಲ್ಲಿ ದೇವರನ್ನು ಕಾಣುವ ಭ್ರಾಮಕ ಜನ ದಲಿತರಲ್ಲಿ ಮಾನವತೆಯನ್ನು ಕಾಣದ ಮೂಢರಾಗಿದ್ದಾರೆ. ಸರಕಾರದ ತೇಪೆ ಕೆಲಸದಿಂದ ದಲಿತರ ಉದ್ಧಾರ ಸಾಧ್ಯವಿಲ್ಲ. ಸಂಘಟಿತ ಹೋರಾಟವೊಂದೇ ಬದಲಾವಣೆಗಿರುವ ದಾರಿ" ಎಂದು ಹೇಳಿದರು.

"ಇಂದಿನ ನಮ್ಮ ಶಿಕ್ಷಣ ಪದ್ಧತಿ ಅವೈಜ್ಞಾನಿಕವಾದದ್ದು. ಬ್ರಿಟೀಷ್ ಸಾಮ್ರಾಜ್ಯಶಾಹಿಗಳಿಂದ ದತ್ತು ತೆಗೆದುಕೊಂಡ ಈ ಪದ್ಧತಿ ಲಕ್ಷಾಂತರ ವಿದ್ಯಾವಂತ ಯುವಜನರನ್ನು ನಿರುದ್ಯೋಗಿಗಳನ್ನಾಗಿಸಿದೆ. ಖಾಸಗಿ ವ್ಯಕ್ತಿಗಳು ಶಾಲೆ, ಕಾಲೇಜುಗಳನ್ನು ವ್ಯಾಪಾರಿ ಸಂಸ್ಥೆಗಳನ್ನಾಗಿಸಿ ಸುಲಿಗೆ ಮಾಡುತ್ತಿದ್ದಾರೆ. ಸಮಾಜದ ವಾಸ್ತವಕ್ಕೂ ಪಠ್ಯಪುಸ್ತಕಗಳ ವಿಷಯಗಳಿಗೂ ಸಂಬಂಧವಿಲ್ಲದಿದ್ದು ಆಳುವ ವರ್ಗದ ಬಂಡವಾಳಶಾಹಿ ಮೌಲ್ಯಗಳ ಪ್ರತಿರೂಪವಾಗಿರುವ ಇಂದಿನ ಶಿಕ್ಷಣ ಪದ್ಧತಿಯು ಮೂಲಭೂತ ಬದಲಾವಣೆ ವಿದ್ಯಾರ್ಥಿ ಜನಾಂಗ ಸಂಘಟಿತರಾಗಿ ಬಂಡೇಳುವುದರಿಂದ ಮಾತ್ರ ಸಾಧ್ಯ", ಇದು "ನಮ್ಮ ಶಿಕ್ಷಣ ಪದ್ಧತಿ" ಎಂಬ ವಿಷಯದ ಮೇಲೆ ಪ್ರಬಂಧ ಮಂಡಿಸಿದ ಶ್ರೀ ಸುರೇಶ್ ಹೊಳ್ಳರ ಸ್ಪಷ್ಟ ಅಭಿಪ್ರಾಯ.

"ಬಹುಪಾಲು ಜನತೆಯ ಆಶಯಗಳ ದೃಷ್ಟಿಯಿಂದ ಸಾವಿರಾರು ವರ್ಷಗಳಿಂದ ರಚಿತವಾದ ಬಹುಪಾಲು ಸಾಹಿತ್ಯ ನಿರುಪಯೋಗಿ. ಬೆರಳೆಣಿಕೆಯ ಜನರ ಸಂಸ್ಕೃತಿ ಇಡೀ ಜನಸಮುದಾಯದ ಸಂಸ್ಕೃತಿ ಆಗಲಾರದು. ಮಹಲುಗಳಲ್ಲಿ ಕುಳಿತು ಚಿಂತಿಸುವ ಜನರಿಗೆ ಗುಲಾಬಿ ಹೂಗಳಷ್ಟೇ ವರ್ಣನೆಗೆ ಸಿಗುತ್ತದೆ. ನಗರ ಪ್ರಜ್ಞೆಯ ಜನ ಪ್ರೇಮ, ಕಾಮದ ಬಗ್ಗೆ ಗೀಚುತ್ತಾರೆ. ಕಲೆಗಾಗಿ ಕಲೆ ಎನ್ನುವ ಜನ ಕಲೆ ಜನರಿಗಾಗಿ ಎನ್ನುವ ಜನಪರ ನಿಲುವಿಗೆ ವಿರೋಧಿಗಳಾಗಿದ್ದಾರೆ. ಇವರೆಲ್ಲರಿಗೂ ಸವಾಲು ಬಂಡಾಯ ಸಾಹಿತ್ಯದ ಹುಟ್ಟು. ಬಂಡಾಯ ಸಾಹಿತಿಗಳು ಜನ ಸಮುದಾಯದ ಆಶಯಗಳಿಗೆ ರೂಪುಕೊಡುವುದರೊಂದಿಗೆ ಎಡ ಮತ್ತು ಪ್ರಜಾಪ್ರಭುತ್ವವಾದಿ ನಿಲುವಿಗೆ ಬದ್ಧರಾಗಿದ್ದಾರೆ" ಎಂದು "ಸಾಹಿತ್ಯದ ಹೊಸ ಧ್ವನಿ ಬಂಡಾಯ" ಎಂಬ ವಿಷಯದ ಮೇಲೆ ಪ್ರಬಂಧ ಮಂಡಿಸಿದ ಶ್ರೀ ವಾಸುದೇವ ಉಚ್ಚಿಲರು ಹೇಳಿದರು.

ನಿಯೋಜಿತ ಭಾಷಣಗಾರರಾಗಿ ವಿಚಾರಗೋಷ್ಠಿಯಲ್ಲಿ ಭಾಗವಹಿಸಿದ ಶ್ರೀ ಕೋಟ ರಾಮಚಂದ್ರ ಉಡುಪರು ಮಾತನಾಡುತ್ತಾ "ಸ್ಥಾಪಿತ ಹಿತಾಸಕ್ತಿಗಳ ಬಗ್ಗೆ ಯುವಜನ ಜಾಗೃತರಾಗಬೇಕು. ಯಾವುದೇ ವಿಚಾರವನ್ನು ಪ್ರಶ್ನಿಸದೆ ಅಂಗೀಕರಿಸಬಾರದು. ಶೋಷಣಾರಹಿತ ಸಮಸಮಾಜ ವ್ಯವಸ್ಥೆಯ ರಚನೆ ದಾಸ್ಯದ ಸಂಕೋಲೆಯನ್ನು ಕಡಿದಾಗ ಮಾತ್ರ ಸಾಧ್ಯ" ಎಂದರು.

"ನಮ್ಮ ದೇಶದ ಸ್ಥಿತಿಗತಿ ಬಗ್ಗೆ ಯುವಜನ ಚಿಂತಿಸಬೇಕು. ಹುಟ್ಟಿದ ತಪ್ಪಿಗೆ ಬದುಕುವ ಸ್ಥಿತಿ ಇಲ್ಲವಾಗಬೇಕು. ರೋಗಗ್ರಸ್ಥ ಸಮಾಜ ವ್ಯವಸ್ಥೆ ಯುವಜನರ ತಾಳ್ಮೆಗೆ ಸವಾಲು. ಇಂತಹ ಸಂದರ್ಭದಲ್ಲಿ ಕೋಟೇಶ್ವರದಂತ ಗ್ರಾಮದಲ್ಲಿ ವಿಚಾರ ಮಂಥನ ನಡೆಯುತ್ತಿರುವುದು ಬಹಳಷ್ಟು ಮಹತ್ವದ ವಿಚಾರವಾಗಿದೆ" ಎಂದು ಮೊದಲ ಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದ ಬಿ. ಮಾಧವ ಹೇಳಿದರು.

ಗೋಷ್ಠಿಯಲ್ಲಿ ವಿಶೇಷ ಆಹ್ವಾನಿತರಾಗಿ ಭಾಗವಹಿಸಿದ್ದ ಡಾ. ಪಿ.ಕೆ.ಆರ್. ವಾರಿಯರ್ ಕುಂದಾಪುರದ ಎಸ್. ಎಫ್. ಐ ಚಟುವಟಿಕೆಯನ್ನು ಮೆಚ್ಚಿ ಮಾತನಾಡಿದರು. ಕೇರಳದಲ್ಲಿ ಎಸ್. ಎಫ್. ಐ. ಹುಟ್ಟಿ ಬೆಳೆದ ರೀತಿಯನ್ನು ಸ್ಫೂರ್ತಿದಾಯಕವಾಗಿ ವಿವರಿಸಿದ ಅವರು ಆರೆಸ್ಸೆಸ್ ಮೊದಲಾದ ಜಾತಿ ಸಂಘಟನೆಗಳ ಬಗ್ಗೆ ಜಾಗ್ರತರಾಗಬೇಕೆಂದು ಕರೆ ನೀಡಿದರು.

ಮಧ್ಯಾಹ್ನದ ಮೇಲೆ ನಡೆದ ಮಹಿಳಾ ಗೋಷ್ಠಿಯಲ್ಲಿ ಭಾರದಲ್ಲಿ ಮಹಿಳೆ ಎದುರಿಸುತ್ತಿರುವ ವಿವಿಧ ಸಮಸ್ಯೆಗಳ ಬಗ್ಗೆ ವಿಮರ್ಶೆ ನಡೆಯಿತು.

"ವರದಕ್ಷಿಣಾ ಪದ್ಧತಿ" ಎಂಬ ವಿಷಯದ ಮೇಲೆ ಮಾತನಾಡಿದ ಕುಮಾರಿ ಯಮುನಾ, "ವರದಕ್ಷಿಣೆಯು ಮಹಿಳೆಯನ್ನು ಶೋಷಿಸುವ ಹಲವು ರೂಪದಲ್ಲಿ ಒಂದು; ಬಂಡವಾಳಶಾಹಿ ವ್ಯವಸ್ಥೆ ಹುಟ್ಟು ಹಾಕಿರುವ ಈ ಪದ್ಧತಿಯ ನಾಶ ಈಗಿನ ಸಮಾಜ ವ್ಯವಸ್ಥೆಯ ಮೂಲಭೂತ ಬದಲಾವಣೆಯಿಂದ ಮಾತ್ರ ಸಾಧ್ಯ" ಎಂದರು.

"ಪುರುಷ ಸ್ವಾತಂತ್ರ್ಯದ ಪರಮಾವಧಿ ಅತ್ಯಾಚಾರ, ಒಮ್ಮೆ ಅತ್ಯಾಚಾರಕ್ಕೆ ಒಳಗಾದ ಮಹಿಳೆ ತನ್ನ ಇಡೀ ಜೀವನವನ್ನೇ ಕೊರಗಿನಿಂದ ಕಳೆಯಬೇಕಾಗುತ್ತದೆ. ಬಾಗಪತ್ತಿನ ಮಾಯಾತ್ಯಾಗಿ ಸೇರಿದಂತೆ ದೇಶದಲ್ಲಿ ಮಹಿಳೆಯ ಮೇಲೆ ನಡೆಯುತ್ತಿರುವ ಅತ್ಯಾಚಾರ ಇಂದಿನ ನಮ್ಮ ದೇಶದ ಲಜ್ಜೆಗೆಟ್ಟ ವ್ಯವಸ್ಥೆಯ ಪ್ರತೀಕ. ಹೆಂಗಸನ್ನು ಸರ್ವ ರೀತಿಯಿಂದಲೂ ತುಳಿಯಲು ಸೃಷ್ಟಿಯಾಗಿರುವ ಈ ದೇಶದ ಕಾನೂನುಗಳು ಮೊದಲು ಮಾರ್ಪಾಡಾಗಬೇಕು. ಭ್ರಷ್ಟ ವ್ಯವಸ್ಥೆಯ ವಿರುದ್ಧ ಹೋರಾಡಬೇಕು. ಮಹಿಳೆಯೊಬ್ಬಳು ದೇಶದಪ್ರಧಾನಿಯಾಗಿದ್ದೂ ಸ್ತ್ರೀ ಜನಾಂಗದ ಮೇಲೆ ನಿರಂತರ ಅತ್ಯಾಚಾರ ನಡೆಯುತ್ತಿರುವುದು ನಾಚಿಕೆಗೇಡಿನ ವಿಚಾರ". ಇದು "ಸ್ತ್ರೀ ಮತ್ತು ಅತ್ಯಾಚಾರ" ಎಂಬ ವಿಷಯದ ಮೇಲೆ ಪ್ರಬಂಧ ಮಂಡಿಸಿದ ಕುಮಾರಿ ವಸಂತಿಯ ಅಭಿಪ್ರಾಯ.

"ಮಹಿಳೆ ಮತ್ತು ಸಂಪ್ರದಾಯ" ಎಂಬ ವಿಷಯದ ಮೇಲೆ ಪ್ರಬಂಧ ಮಂಡಿಸಿದ ಡಾ. ಸುಶೀಲ, "ಮೂಢ ಸಂಪ್ರದಾಯಗಳು ಮಹಿಳೆಯ ಪ್ರಗತಿಗೆ ಮಾರಕವಾಗಿವೆ. ಸತಿಪದ್ಧತಿ, ಬಾಲ್ಯ ವಿವಾಹ, ಘೋಷಾ ಪದ್ಧತಿ, ಕೇಶ ಮುಂಡನ-ಹೀಗೆ ಇಂತಹ ಹತ್ತು ಹಲವು ಕಂದಾಚಾರಗಳು ಸ್ತ್ರೀಯ ಪ್ರಗತಿಗೆ ಅಡ್ಡಿಯಾಗಿವೆ. ಈ ಸಂಪ್ರದಾಯಗಳ ಹುಟ್ಟು ಬೆಳವಣಿಗೆಗೆ ಕಾರಣವಾದ ಸಮಾಜ ವ್ಯವಸ್ಥೆಯ ಬದಲಾವಣೆ ಬಗ್ಗೆ ಚಿಂತಿಸಬೇಕು. ವರ್ಗರಹಿತ ಸಮಾಜ ನಿರ್ಮಾಣವಾದಾಗ ಮಾತ್ರ ದಾಸ್ಯರಹಿತ, ಮಾನವೀಯತೆಗೆ ಬೆಲೆ ಬರುತ್ತದೆ. ಅರ್ಥಹೀನ ಗೊಡ್ಡು ಸಂಪ್ರದಾಯಗಳು ಇಲ್ಲವಾಗಿ ಸ್ತ್ರೀ ಪುರುಷ ಸಮಾನ ಸ್ಥಾನಮಾನ ಪಡೆಯಲು ಸಾಧ್ಯವಾಗುತ್ತದೆ" ಎಂದು ಹೇಳಿದರು.

ಮಹಿಳಾಗೋಷ್ಠಿಯ ಅಧ್ಯಕ್ಷತೆ ವಹಿಸಿದ ಶ್ರೀಮತಿ ದೇವಕಿವಾರಿಯರ್ ಮಾತನಾಡುತ್ತಾ "ಯಾವುದೇ ಹೋರಾಟಕ್ಕೆ ಬಲಿಷ್ಟ ಸಂಘಟನೆ ಮುಖ್ಯ. ಸ್ತ್ರೀ ಜನಾಂಗ ತನ್ನ ಹಕ್ಕು ಬಾಧ್ಯತೆಗಳಿಗಾಗಿ ಹೋರಾಡುವಾಗ ಇತರ ಜನವಿಭಾಗದ ಹೋರಾಟದೊಂದಿಗೆ ತನ್ನನ್ನು ಗುರುತಿಸಿಕೊಳ್ಳಬೇಕು. ಸ್ತ್ರೀಯರ ಸಂಘಟಿತ ಹೋರಾಟ ಪುರುಷರ ವಿರುದ್ಧವಾಗಿರದೆ ಸ್ತ್ರೀ ಪುರುಷ ಇಬ್ಬರನ್ನೂ ಶೋಷಿಸುತ್ತಿರುವ ಇಂದಿನ ಸಮಾಜ ವ್ಯವಸ್ಥೆಯ ವಿರುದ್ಧವಾಗಿರಬೇಕು" ಎಂದು ಹೇಳಿದರು. ಕೇರಳ ರಾಜ್ಯದಂತೆ ಕರ್ನಾಟಕದಲ್ಲೂ ಮಹಿಳಾ ಸಂಘಟನೆ ಬಲಿಷ್ಟವಾಗಿ ಬೆಳೆಸಬೇಕೆಂದು ಕೇಳಿಕೊಂಡರು.

ದಿನವಿಡೀ ನಡೆದ ಗೋಷ್ಠಿಯಲ್ಲಿ ಮಂಡಿಸಲ್ಪಟ್ಟ ಪ್ರತಿಯೊಂದು ಪ್ರಬಂಧದ ಮೇಲೆ ನಡೆದ ಚರ್ಚೆ, ವಿಮರ್ಶೆಗಳು ಗೋಷ್ಠಿಯಲ್ಲಿ ಎಲ್ಲರ ಕುತೂಹಲವನ್ನು ಕೆರಳಿಸಿತು.

ಗೋಷ್ಠಿಯ ಆರಂಭದಲ್ಲಿ ಶ್ರೀದಾಸ್ ಭಂಡಾರಿಯವರು ಸ್ವಾಗತಿಸಿದರು. ಮಹಿಳಾ ಗೋಷ್ಠಿಗೆ ಸ್ವಾಗತ ಬಯಸಿದವರು ಕುಮಾರಿ ಸುಲೋಚನ. ಆರ್. ಜಯಕುಮಾರ್‌ರವರು ಸಭಿಕರಿಗೆ ಎಸ್. ಎಫ್. ಐ. ಮತ್ತು ಡಿ. ವೈ. ಒ. ಸಂಘಟನೆಗಳನ್ನು ಪರಿಚಯಿಸಿದರು. ಗೋಷ್ಠಿಯ ನಡುನಡುವೆ ಕುಂದಾಪುರ ಸಮುದಾಯದವರು ಪ್ರಗತಿಪರ ಹಾಡುಗಳನ್ನು ಹಾಡಿದರು. ವಿಚಾರಗೋಷ್ಠಿಯ ಕೊನೆಯಲ್ಲಿ ಎಸ್. ಎಫ್. ಐ. ಅಧ್ಯಕ್ಷರಾದ ಶ್ರೀ ಶಂಭು ಬನ್ನಾಡಿ ಧನ್ಯವಾದ ಸಲ್ಲಿಸಿದರು.

ವರದಿ : ಆರ್. ಜಯಕುಮಾರ್

ಶೃಂಗೇರಿಯಲ್ಲಿ ಯುವಜನ ಸಭೆ

ಚಿಕ್ಕಮಗಳೂರು ಜಿಲ್ಲೆಯ ಶೃಂಗೇರಿ ತಾಲ್ಲೂಕಿನ ಯುವಜನರು ತಾ. 23, 24-9-80ರಂದು ಶೃಂಗೇರಿಯಲ್ಲಿ ಸಭೆ ಸೇರಿದ್ದರು. ಸುಮಾರು 40 ತರುಣರು ಭಾಗವಹಿಸಿದ್ದ ಈ ಸಭೆಯಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಮಲೆನಾಡು ಪ್ರಾದೇಶಿಕ ಸಮಿತಿ ಕಾರ್ಯದರ್ಶಿ ಕಾಂ. ಸಿ. ನಂಜುಂಡಪ್ಪನವರು ಉಪಸ್ಥಿತರಿದ್ದು ಸೂಕ್ತ ಮಾರ್ಗದರ್ಶನ ನೀಡಿದರು.

ಹಾಸನ ಹಾಗೂ ಚಿಕ್ಕಮಗಳೂರು ಜಿಲ್ಲಾ ಕರ್ನಾಟಕ ಪ್ರಜಾಸತ್ತಾತ್ಮಕ ಯುವಜನ ಸಂಘಟನೆಯ ಸಂಚಾಲಕ ಹೆಚ್. ಕೆ. ಅಮೀರ್ ಜಾನ್ ಈ ತಾಲ್ಲೂಕಿನ ಯುವಜನತೆಯ ಸಮಸ್ಯೆಗಳನ್ನು ಚರ್ಚಿಸುತ್ತಾ, ಸಮಾಜದಲ್ಲಿ ಯುವಜನರನ್ನು ಕಾಡುತ್ತಿರುವ ನಿರುದ್ಯೋಗ, ಹಳೆಯ ಮೌಲ್ಯಗಳ ಅನಿಷ್ಟ ಪದ್ಧತಿ ಮುಂತಾದ ಸಮಸ್ಯೆಗಳ ವಿರುದ್ಧ ಹೋರಾಡಲು ವೈಜ್ಞಾನಿಕ ದೃಷ್ಟಿಕೋಣ ಬೆಳೆಸಿಕೊಂಡು ಪರಿಹಾರ ಪಡೆಯಲು ಸಂಘಟಿತರಾಗಬೇಕಾದಿರುವ ಅವಶ್ಯಕತೆಗಳನ್ನು ಒತ್ತಿ ಹೇಳಿದರು

ದಿನಾಂಕ 31-8-80 ರಂದು ರಾಜ್ಯಾದ್ಯಂತ ಪೋಲೀಸ್ ದೌರ್ಜನ್ಯ ವಿರೋಧಿ ದಿನಾಚರಣೆ ನಡೆಸಿದ ಕಾರ್ಯಕ್ರಮದಂತೆ, ಶೃಂಗೇರಿಯಲ್ಲಿ ಪೋಲೀಸ್ ದಬ್ಬಾಳಿಕೆಗಳ ವಿರುದ್ಧ ಪ್ರತಿಭಟನೆ ನಡೆಸಿರುವುದರ ಬಗ್ಗೆ ಈ ಯುವಜನರ ಪೋಷಕ ವರ್ಗದಿಂದಲೂ, ಸ್ಥಳೀಯ ಜನತೆಯಿಂದಲೂ ಪ್ರೋತ್ಸಾಹಕರ ಬೆಂಬಲ ದೊರೆತಿದ್ದು, ಈ ಯುವಕರು ಮುಂದೆಯೂ ಇಂತಹ ಹೋರಾಟಗಳಲ್ಲಿ ಸಕ್ರಿಯವಾಗಿ ಭಾಗವಹಿಸಲು ನಿರ್ಧರಿಸಿದರು.

ಶೃಂಗೇರಿ ತಾಲ್ಲೂಕಿಗೆ 7ಜನರಿರುವ ಸಂಘಟನಾ ಸಮಿತಿಯನ್ನು ರಚಿಸಿ, ಕಾಂ. ವಿಠಲ್ ಹೆಗ್ಡೆಯವರನ್ನು ಸಂಚಾಲಕರನ್ನಾಗಿ ಆಯ್ಕೆ ಮಾಡಲಾಗಿದೆ.

○

ಜಪ್ಪು ಬಪ್ಪಾಲಿನಲ್ಲಿ ಯುವಜನ ಸಂಘಟನೆ

ಮಂಗಳೂರಿನ ಜಪ್ಪುಬಪ್ಪಾಲಿನಲ್ಲಿ 28-9-80ರಂದು ಸಂಜೆ 4 ಗಂಟೆಗೆ ಯುವಜನ ಸಭೆ ನಡೆದು ಕಾಂ. ಬಾಸ್ಕರ ಮತ್ತು ಕೊಂಗಪ್ಪರೈ ಅವರು ಸಂಚಾಲಕರುಗಳಾಗಿರುವ 10ಮಂದಿಯ ಸಂಘಟನಾ ಸಮಿತಿಯನ್ನು ಆಯ್ಕೆ ಮಾಡಲಾಯಿತು, ಯುವಜನ ಸಂಘಟನೆ ಮಂಗಳೂರು ತಾಲ್ಲೂಕು ಸಂಚಾಲಕ ಕಾಂ. ಬಿ ಉಮಾನಾಥವರು ಮಾರ್ಗದರ್ಶನವಿತ್ತರು. ●

ಕೋಲಾರ ಜಿಲ್ಲಾ ವಿರೋಧ ಪಕ್ಷಗಳ ಸಮ್ಮೇಳನ

ಕೋಲಾರ ಜಿಲ್ಲೆಯಲ್ಲಿ ಬಲಿಷ್ಠ ವಿರೋಧಿರಂಗವನ್ನು ಕಟ್ಟಲು ಎಲ್ಲ ವಿರೋಧ ಪಕ್ಷಗಳು ಒಕ್ಕೊರಲಿನಿಂದ ನಿರ್ಧರಿಸಿ 28-9-80ರಂದು ಸಭೆ ಸೇರಿದ್ದವು. ಜಿಲ್ಲೆಯು ನಿರಂತರ ಕ್ಷಾಮಕ್ಕೆ ತುತ್ತಾಗಿ ರೈತರಿಗೆ ಜೀವನ ದುಸ್ತರವಾಗುತ್ತಿರುವುದನ್ನು ಎಲ್ಲರೂ ವಿಶದವಾಗಿ ಚರ್ಚಿಸಿದರು. ಚುನಾವಣಾ ರಾಜಕೀಯವನ್ನು ಮರೆತು ರೈತರ ಸಮಸ್ಯೆಗಳನ್ನು ಪರಿಶೀಲಿಸಿ, ಅವನ್ನು ಬಗೆಹರಿಸಲು ಒಂದಾಗಿ ಹೋರಾಟ ನಡೆಸಲು ತೀರ್ಮಾನಿಸಲಾಗಿದೆ. ಈ ಬಗ್ಗೆ ವಿರೋಧಪಕ್ಷಗಳ ಕ್ರಿಯಾಸಮಿತಿಯನ್ನೂ ರಚಿಸಲಾಯಿತು. ಈ ಸಮಿತಿಯ ಸಂಚಾಲಕರಾಗಿ ಕೋಲಾರದಿಂದ ಮಾಜಿ ಶಾಸಕ ಪಿ. ವೆಂಕಟಗಿರಿಯಪ್ಪ, ಬಾಗೇಪಲ್ಲಿಯಿಂದ ಡಿ. ಎನ್. ವೆಂಕಟರೆಡ್ಡಿ, ಚಿಂತಾಮಣಿಯಿಂದ ವೆಂಕಟರೆಡ್ಡಿ ಮತ್ತು ಡಿ. ವಿ. ಅಶ್ವತ್ಥನಾರಾಯಣರೆಡ್ಡಿ ಸರ್ವಾನುಮತದಿಂದ ಆಯ್ಕೆಯಾದರು. ಇದರ ಜೊತೆಗೆ ಹನ್ನೊಂದು ಜನರ ಕಾರ್ಯಕಾರಿ ಸಮಿತಿ ರಚಿಸಲಾಗಿದೆ.

ಆ ದಿನ ಸಂಜೆ ವಿರೋಧ ಪಕ್ಷಗಳ ಕ್ರಿಯಾಸಮಿತಿ ಆಶ್ರಯದಲ್ಲಿ ಬಹಿರಂಗ ಸಭೆ ಏರ್ಪಡಿಸಲಾಗಿತ್ತು. ಸಭೆಯ ಅಧ್ಯಕ್ಷತೆಯನ್ನು ಮಾಜಿ ಶಾಸಕ ವೆಂಕಟಗಿರಿಯಪ್ಪ ವಹಿಸಿದ್ದರು. ಸಭೆಯನ್ನು ಉದ್ದೇಶಿಸಿ ಆರ್. ವೆಂಕಟರಾಮಯ್ಯ, ಎ. ವಿ. ಅಪ್ಪಸ್ವಾಮಿರೆಡ್ಡಿ, ಮಜೀದ್, ಲಕ್ಷ್ಮಣರೆಡ್ಡಿ, ಎಂ. ವಿ. ಪತಿ ಅಶ್ವತ್ಥನಾರಾಯಣರೆಡ್ಡಿ ಹಾಗೂ ಕರ್ನಾಟಕ ಪ್ರಾಂತ ರೈತಸಂಘದ ಅಧ್ಯಕ್ಷರಾದ ಮುಗುವಾಳಪ್ಪ ಅವರು ಮಾತನಾಡಿದರು. ನಂತರ ಕೃಷ್ಣಮೂರ್ತಿ ವಂದಿಸಿದರು.

ಕೋಲಾರದಲ್ಲಿ ಭೀಕರ ಕ್ಷಾಮ ಪರಿಸ್ಥಿತಿ ಉಂಟಾಗಿದ್ದು, ಸರ್ಕಾರ ಇದನ್ನು ಕ್ಷಾಮ ಪ್ರದೇಶವೆಂದು ಸಾರಬೇಕು, ಜಿಲ್ಲೆಯ ಕೆರೆಗಳೆಲ್ಲ ಒಣಗಿದ ಚಿಕ್ಕ ಕೆರೆಗಳಾದ್ದರಿಂದ ನೀರಿನ ತೆರಿಗೆ ರದ್ದು ಮಾಡಬೇಕು, ಸಣ್ಣ ಮತ್ತು ಅತಿ ಸಣ್ಣ ರೈತರ ಸರ್ಕಾರಿ ಸಾಲಗಳನ್ನು ಮನ್ನಾ ಮಾಡಬೇಕು, ಕೋಲಾರ ಜಿಲ್ಲೆ ಕ್ಷಾಮ ಪ್ರದೇಶವಾದ್ದರಿಂದ ಪಾಲಾರ್, ಪೆನ್ನಾರ್, ಚಿತ್ರಾವತಿ, ಕಾವೇರಿ ನದಿಗಳಿಂದ ಶಾಶ್ವತ ನೀರಾವರಿ ಸೌಲಭ್ಯ ಕಲ್ಪಿಸಬೇಕು, ಬಾಗೇಪಲ್ಲಿಯ ಇತ್ತೀಚಿನ ಪೋಲೀಸ್ ದೌರ್ಜನ್ಯದ ಬಗ್ಗೆ ನ್ಯಾಯಾಂಗ ತನಿಖೆ ನಡೆಯಬೇಕು, ಮೃತಪಟ್ಟವರಿಗೆ 25,000 ಪರಿಹಾರ ನೀಡಬೇಕು, ಬೆಂಗಳೂರಿನಲ್ಲಿ ಕಾಂಗ್ರೆಸ್ ಗೂಂಡಾಗಳ ಪತ್ರಿಕಾಲಯ ದಾಳಿಯ ಬಗ್ಗೆ ನ್ಯಾಯಾಂಗ ತನಿಖೆ ನಡೆಸಬೇಕು ಎಂಬ ಬೇಡಿಕೆಗಳನ್ನು ಈಡೇರಿಸಲು ಸಭೆ ಆಗ್ರಹಪೂರ್ವಕವಾಗಿ ಸರ್ಕಾರವನ್ನು ಒತ್ತಾಯಿಸಿತು. ●

ಕಾಪೂರಿನಲ್ಲಿ ಬೀಡಿ ಕಾರ್ಮಿಕರ ಸಭೆ

ದ. ಕ. ಜಿಲ್ಲೆಯ ಕಾಪೂರಿನ ಆನಂದನಗರದಲ್ಲಿ ಬೀಡಿಕಾರ್ಮಿಕರ ಸಭೆಯು 5-10-80ರಂದು ಕಾಂ. ಮಹಾಬಲಶೆಟ್ಟಿಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಕಾಂ. ಎಚ್. ಗೋಪಾಲ ಅವರು ಬೀಡಿಕಾರ್ಮಿಕರ ಸಮಸ್ಯೆಗಳನ್ನು ವಿವರಿಸಿ, ಸಂಘಟನೆಯನ್ನು ಬಲಪಡಿಸಲು ಕರೆಕೊಟ್ಟು, ಬೀಡಿಕಾರ್ಮಿಕರಿಗೆ ಆಗುತ್ತಿರುವ ಅನ್ಯಾಯಗಳನ್ನು ಪ್ರತಿಭಟಿಸಲು ಮುಂದಾಗಬೇಕು ಎಂದರು. ನಂತರ ಸಮಿತಿಯನ್ನು ಚುನಾಯಿಸಲಾಯಿತು. ಮಹಾಬಲಶೆಟ್ಟಿ ಅವರು ಕಾರ್ಯದರ್ಶಿಯಾಗಿ ಆಯ್ಕೆಯಾದರು. ಸಮಿತಿಗೆ ಇಲ್ಡ ಡಿಸೋಜ, ದೇವಕಿ, ಹರಿಣಾಕ್ಷಿ, ಪುಷ್ಪಲತ, ಪ್ರಮೀಳ, ಜ್ವಾರ, ಮೇರಿಗ್ರೇಟ್, ಲಕ್ಷ್ಮಣ ಆಯ್ಕೆಯಾಗಿದ್ದಾರೆ. ●

ಸವಡಿಯಲ್ಲಿ ರೈತಕೂಲಿಕಾರರ ಸಂಘ ಸ್ಥಾಪನೆ

ಧಾರವಾಡ ಜಿಲ್ಲೆ ರೋಣ ತಾಲ್ಲೂಕಿನ ಸವಡಿ ಗ್ರಾಮದಲ್ಲಿ ಕಳೆದ ತಿಂಗಳು ರೈತ ಹಾಗೂ ಕೂಲಿಕಾರರ ಸಂಘಟನೆ ಅಸ್ತಿತ್ವಕ್ಕೆ ಬಂದಿತು. ಇತ್ತೀಚಿನ ನರಗುಂದ ರೈತರ ಹೋರಾಟದ ನಂತರ ರಾಜ್ಯದ ರೈತರಲ್ಲಿ ಜಾಗೃತಿ ಉಂಟಾಗಿದೆ. ಶ್ರೀ ಬಿ ಎಲ್. ಪರಡ್ಡಿ, ಈಶ್ವರಪ್ಪ ಹುನಗುಂಡಿ, ಯಲಿಗಾರ ಮುಂತಾದ ಸಂಘಟಕರ ಪರವಾಗಿ ಸಂಗಮೇಶ ಮಂಗಳೂರ ಅವರು ಸಭೆಯನ್ನು ಸ್ವಾಗತಿಸಿದರು. ಮುಖ್ಯ ಅತಿಥಿಯಾಗಿ ಈಶ್ವರಪ್ಪ ಹಟ್ಟಿ ಮಾತನಾಡಿ, ಕೃಷಿಕೂಲಿಕಾರರು ರೈತರು ಒಗ್ಗಟ್ಟಿನಿಂದ ಹೋರಾಡಿದರೆ ಗುರಿಸಾಧಿಸಬಹುದು ಎಂದರು.

ಕರ್ನಾಟಕ ಪ್ರಾಂತರೈತಸಂಘದ ಧಾರವಾಡ ಜಿಲ್ಲಾ ಸಮಿತಿಯ ಸದಸ್ಯರಾದ ಕಾಂ. ಹನುಮಂತ ಹಳಕಟ್ಟಿಯವರು ಸಂಘವನ್ನು ಉದ್ಘಾಟಿಸುತ್ತಾ ಇತಿಹಾಸದಲ್ಲಿ ನಡೆದ ರೈತ ದಂಗೆಗಳನ್ನು ವಿವರಿಸಿದರು. ರೈತರ ಏಳಿಗೆ ಆಗಬೇಕಾದರೆ ರೈತ ಕೃಷಿಕೂಲಿಕಾರರ ಸಂಘಟಿತ ಹೋರಾಟ ತುಂಬ ಮುಖ್ಯ ಎಂದರು. ●

ಹಮಾಲಿ ಮತ್ತು ಅಕ್ಕಿ ಗಿರಣಿ ಕಾರ್ಮಿಕ ಸಂಘದ ಸಭೆ

ಶಿವಮೊಗ್ಗ ಜಿಲ್ಲೆ ಭದ್ರಾವತಿಯ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕಚೇರಿಯಲ್ಲಿ ಹಮಾಲಿ ಮತ್ತು ಅಕ್ಕಿ ಗಿರಣಿ ಕಾರ್ಮಿಕರ ಸಂಘದ ಸಭೆಯು 6-10-80ರಂದು ಸೇರಿತ್ತು. ಕಾಂ. ಮಹಮದ್ ರಫಿ ಅಧ್ಯಕ್ಷತೆ ವಹಿಸಿದ್ದರು. ಹೊಸ ವರ್ಷದ ಪದಾಧಿಕಾರಿಗಳನ್ನು ಚುನಾಯಿಸಿದ ನಂತರ ಸಂಘವನ್ನು ಸಿ.ಐ.ಟಿ.ಯು.ಗೆ ಸೇರ್ಪಡೆ ಮಾಡಲು ತೀರ್ಮಾನಿಸಲಾಯಿತು. ●

ತೋಕೂರಿನಲ್ಲಿ ಯುವಜನ ಸಮ್ಮೇಳನ

ದ. ಕ. ಜಿಲ್ಲೆಯ ತೋಕೂರು ಗ್ರಾಮದಲ್ಲಿ ಪ್ರಜಾಸತ್ತಾತ್ಮಕ ಯುವಜನ ಸಂಘಟನೆಯ ಪ್ರಥಮ ಸಮ್ಮೇಳನವು 5-10-80 ರಂದು ನಡೆಯಿತು. ಮೊದಲು ತಾಲೂಕು ಸಂಚಾಲಕ ಕಾಂ. ಬಿ ಉಮಾನಾಥ ಧ್ವಜಾರೋಹಣ ಮಾಡಿದರು. ಕಾಂ. ಸುಂದರ ಸಾಲಿಯಾನ್, ಪಿ. ಪುತ್ತಬ್ಬ ರಾಮಣ್ಣ ಇವರನ್ನುಳ್ಳ ಅಧ್ಯಕ್ಷ ಮಂಡಳಿಯು ಸಮ್ಮೇಳನಕ್ಕೆ ಆಯ್ಕೆಯಾಯಿತು. ಸಮ್ಮೇಳನವನ್ನು ಆನಂದ ಉಳ್ಳಾಲ ಉದ್ಘಾಟಿಸಿದರು. ಕಾರ್ಯದರ್ಶಿ ಗೋಪಾಲ ಅಂಚನ್ ಮಂಡಿಸಿದ ವರದಿಯ ಮೇಲೆ ಚರ್ಚೆ ಆಯಿತು.

ನಂತರದ ಸಭೆಯಲ್ಲಿ ಬಿ. ಮಾಧವ ಅವರು ದೇಶದ ಯುವಜನತೆಯ ಪರಿಸ್ಥಿತಿಯ ಬಗ್ಗೆ ಮಾತನಾಡಿದರು, ಯುವಜನರು ಸಂಘಟಿತರಾಗಲು ಅವರು ಕರೆ ಕೊಟ್ಟರು.

ಸಂಘಟನೆಗೆ ಹೊಸ ಕಾರ್ಯಕಾರಿ ಮಂಡಳಿಯನ್ನು ಅಂದು ಚುನಾಯಿಸಲಾಯಿತು. ○

ಗೂಂಡಾ ಅಕ್ರಮಕ್ಕೆ ರೈತಸಂಘ ಪ್ರತಿಭಟನೆ

ಬಿಜಾಪುರ ಜಿಲ್ಲೆಯ ಬಸವನ ಬಾಗೇವಾಡಿಯ ನಾಗೂರಿನಲ್ಲಿ ಬಸವ್ವಾ ತೆಲಗಿ ಎಂಬುವರ ಗಂಡನ ಹೆಸರಿನಲ್ಲಿ ಇದ್ದ ಹೊಲಮನೆ ಎಲ್ಲವನ್ನೂ ಸಂಗಯ್ಯಾ ರುದ್ರಯ್ಯಮಠ ಮತ್ತು ಅವರ ಐವರು ಗಂಡಸು ಮಕ್ಕಳು ಮೋಸದಿಂದ ವಶಪಡಿಸಿಕೊಂಡು ಆಕೆಯನ್ನು ನಿರ್ಗತಿಕಳನ್ನಾಗಿ ಮಾಡಿದ್ದಾರೆ. ಈ ಬಗ್ಗೆ ಸಚಿವರು, ಸರ್ಕಾರಿ ಅಧಿಕಾರಿಗಳು ಮತ್ತು ಪೋಲೀಸ್ ಅಧಿಕಾರಿಗಳಿಗೆ ದೂರು ಕೊಡಲಾಗಿದೆ. ಬಿಜಾಪುರದ ದಿನಪತ್ರಿಕೆಗಳಲ್ಲೂ ಗೂಂಡಾಗಿರಿಯ ವಿವರ ಬಂದಿದೆ. ಆದರೂ ಸಂಗಯ್ಯ ರುದ್ರಯ್ಯಮಠ ಮತ್ತು ಅವರ ಮಕ್ಕಳು ದಬ್ಬಾಳಿಕೆ ನಡೆಸುತ್ತಲೇ ಇದ್ದಾರೆ. ಇದಕ್ಕೆ ಪೋಲೀಸರು ಮೂಕಪ್ರೇಕ್ಷಕರಾಗಿದ್ದಾರೆ. ಈ ಬಗ್ಗೆ ಕ್ರಮ ತೆಗೆದುಕೊಂಡ ಬಸವ್ವ ಅವರಿಗೆ ನ್ಯಾಯ ದೊರಕಿಸದಿದ್ದರೆ ರೈತ ಸಂಘ ಸತ್ಯಾಗ್ರಹ ಚಳುವಳಿಯನ್ನು ಆರಂಭಿಸುತ್ತದೆ ಎಂದು ಬಿಜಾಪುರ ತಾಲ್ಲೂಕು ರೈತಸಂಘದ ಅಧ್ಯಕ್ಷ ಭೀಮಸಿ ಕಲಾದಗಿ ಹೇಳಿಕೆ ಇತ್ತಿದ್ದಾರೆ. ○

ಕುಣಿಗಲ್ ಬೀಡಿ ಕೆಲಸಗಾರರ ಸಂಘದ ಸಭೆ

ತುಮಕೂರು ಜಿಲ್ಲಾ ಕುಣಿಗಲ್ಲಿನಲ್ಲಿ ತಾಲ್ಲೂಕು ಬೀಡಿ ಕೆಲಸಗಾರರ ಸಂಘದ ಸಭೆಯು ಕಾಂ. ಸಲೀಮಾ ಬೇಗಂ ಅವರ ಅಧ್ಯಕ್ಷತೆಯಲ್ಲಿ ಸೇರಿತು. ರಾಜ್ಯ ಬೀಡಿ ಫೆಡರೇಷನ್ ಕಾರ್ಯದರ್ಶಿ ಕಾಂ. ಮಹಮದ್ ದಸ್ತಗೀರ್ ಅವರು ಅಖಿಲ ಭಾರತ ಬೀಡಿ ಅಂಡ್ ಸಿಗಾರ್ ಕಾರ್ಮಿಕರ ಫೆಡರೇಷನ್ ಸಮಿತಿ ಸಭೆಯು ಕೈಗೊಂಡ ನಿರ್ಣಯಗಳನ್ನು ಮತ್ತು ಸಿ.ಐ.ಟಿ.ಯು., ಎ.ಐ.ಟಿ.ಯು.ಸಿ, ಹಾಗೂ ಅಜೀಜ್ ಸೇಠ್ ಅವರ ಮುಖಂಡತ್ವದ ಬೀಡಿ ಕಾರ್ಮಿಕರ ಸಂಘಟನೆಗಳು ಜಂಟೀ ಹೋರಾಟ ಯೋಜಿಸುವುದರ ಬಗ್ಗೆ ವರದಿ ಇತ್ತರು. ಕಾಂ. ಬಡೇಸಾಬ್ ಅವರೂ ಮಾತನಾಡಿದರು.

ವಾರದಲ್ಲಿ 6 ದಿನ ಕೆಲಸ ಸಿಗಬೇಕೆಂದೂ, ಎಲೆ ಅವರೇಜಿನಲ್ಲಿನ ಮೋಸದ ವಿರುದ್ಧವೂ, ಪ್ರಾವಿಡೆಂಟ್ ಫಂಡ್ ಹಣದಾಖಲಾತಿ ಕೊಡಬೇಕೆಂದೂ ಒತ್ತಾಯಿಸುವ ಮನವಿಗೆ ಸಹಸ್ರಾರು ಸಹಿ ಸಂಗ್ರಹಿಸಿ ತಹಸೀಲ್ದಾರರಿಗೆ ಕೊಡಲು ನಿರ್ಣಯಿಸಲಾಯ್ತು.

ಹರಿಜನ-ಗಿರಿಜನ ಭೂಹೀನ ರೈತರು, ಮಹಿಳೆಯರಿಂದ ಭೂಗ್ರಹಣ

ಕೋಲಾರ ಜಿಲ್ಲೆಯ ರೈತ ಸಂಘದ ಆದೇಶದಂತೆ ಶ್ರೀನಿವಾಸಪುರ ತಾಲ್ಲೂಕು ರಾಯಲ್‌ಪಾಡ್ ಹೋಬಳಿ ತಿಮ್ಮನಹಳ್ಳಿ ಹತ್ತಿರ ಇರುವ ಸರ್ಕಾರಿ ಬಂಜರು ಭೂಮಿಯನ್ನು ಸುತ್ತಲಿನ ಗ್ರಾಮಗಳಿಗೆ ಸೇರಿದ ಹರಿಜನಗಿರಿಜನರು ಮಹಿಳೆಯರು, ಭೂಹೀನ ರೈತರು ವಶಪಡಿಸಿಕೊಂಡರು. ಕೆಂಬಾವುಟಗಳನ್ನು ಹಿಡಿದು ಕ್ರಾಂತಿಕಾರಿ ಘೋಷಣೆಗಳೊಂದಿಗೆ 80 ಜನರು ಕುಡುಗೋಲು, ಗುದ್ದಲಿ, ಗುದ್ದಾರಿಗಳ ಸಮೇತ ಮುಳ್ಳುಗಿಡಗಳನ್ನು ಸವರಿ ನಲವತ್ತು ನೇಗಿಲುಗಳನ್ನು ಕಟ್ಟಿ ಉತ್ತು ಹುರುಳಿಬಿತ್ತನೆ ಮಾಡಿದರು. ಕಾಂ. ಮುನೀಶ್ವರಾಚಾರಿ ಮತ್ತು ಕಾಂ. ಮುನಿನಾರಾಯಣಸ್ವಾಮಿ ನೇತೃತ್ವ ವಹಿಸಿದ್ದರು.

ಈ ಕೃಷಿಕೂಲಿಗಾರರು 30 ವರ್ಷಗಳಿಂದ ಅನೇಕ ಅರ್ಜಿಗಳನ್ನು ಸರ್ಕಾರಕ್ಕೆ ಕೊಟ್ಟಿದ್ದಾರೆ. ಆದರೆ ಯಾವ ಪ್ರಯೋಜನವೂ ಆಗಿಲ್ಲ. ಭೂಗ್ರಹಣ ಬಿಟ್ಟರೆ ದಲಿತರಿಗೆ ಬೇರೆ ಮಾರ್ಗವಿಲ್ಲ. ಆದ್ದರಿಂದ ರೈತರನ್ನು ಹೆಚ್ಚು ಕಚೇರಿಗೆ ಅಲೆಸದೆ ಅವರಿಗೆ ಜಮೀನು ಸ್ವಾಧೀನ ಪಟ್ಟಾಗಳನ್ನು ಕೊಟ್ಟು ಸಹಕರಿಸಬೇಕೆಂದು ಕೋಲಾರ ಜಿಲ್ಲಾ ರೈತಸಂಘ ಕೋರಿದೆ. ○

ಆಲಗನಹಳ್ಳಿಯಲ್ಲಿ ಬಹಿರಂಗ ಸಭೆ

ತುಮಕೂರು ಜಿಲ್ಲೆಯ ಕುಣಿಗಲ್ ತಾಲ್ಲೂಕಿನ ಕೊತ್ತಗೆರೆ ಹೋಬಳಿ ಆಲಗನಹಳ್ಳಿಯಲ್ಲಿ ದಲಿತ ಸಂಘರ್ಷ ಸಮಿತಿಯ ಆಶ್ರಯದಲ್ಲಿ 6-10-80 ರಂದು ಬಹಿರಂಗ ಸಭೆ ನಡೆಯಿತು. ಚಿಕ್ಕಬೈರಯ್ಯ ಅವರು ಸ್ವಾಗತಿಸಿದ ನಂತರ ಎಸ್. ಎಫ್. ಐ. ಕಾರ್ಯಕರ್ತರು ಕ್ರಾಂತಿಗೀತೆಗಳನ್ನು ಹಾಡಿದರು. ಸಭೆಯ ಅಧ್ಯಕ್ಷತೆಯನ್ನು ಚುಂಚಯ್ಯ ಅವರು ವಹಿಸಿದ್ದರು. ದಲಿತ ಸಂಘರ್ಷ ಸಮಿತಿಯ ತಾಲ್ಲೂಕು ಸಮಿತಿ ಸಂಚಾಲಕರಾದ ಮುದ್ದುಹನುಮಯ್ಯನವರು ಸಮಿತಿಯ ಧ್ಯೇಯಧೋರಣೆಗಳನ್ನು ತಿಳಿಸಿದರು. ನಂತರ ಕುಣಿಗಲ್ ತಾಲ್ಲೂಕು ರೈತ ಸಂಘದ ಕಾರ್ಯದರ್ಶಿ ಬಿ ಜಿ. ಗಂಗಾಧರಯ್ಯ ಅವರು ಮಾತನಾಡಿ ಚರಿತ್ರೆಯನ್ನು ಬದಲಾಯಿಸಲು ದಲಿತ ವರ್ಗ ಒಗ್ಗಟ್ಟಾಗಿ ಹೋರಾಟವನ್ನು ಮಾಡಬೇಕೆಂದು ಕರೆಕೊಟ್ಟರು. ನಾರಾಯಣ್ ಅವರು ವಂದನಾರ್ಪಣೆ ಮಾಡಿದರು. ●

ತುಮಕೂರಿನಲ್ಲಿ ಆರೋಗ್ಯ ಕಾರ್ಯಕರ್ತರ ಸಮ್ಮೇಳನ

ಕರ್ನಾಟಕ ರಾಜ್ಯ ಆರೋಗ್ಯ ಕಾರ್ಯಕರ್ತರ ಸಂಘದ ತುಮಕೂರು ಜಿಲ್ಲಾ ಶಾಖೆಯ ಆಶ್ರಯದಲ್ಲಿ 26-10-80ರಂದು ರಾಜ್ಯ ಸಮ್ಮೇಳನ ನಡೆಯಲಿದೆ. ರಾಜ್ಯಸರ್ಕಾರದ ಆರೋಗ್ಯ ಮಂತ್ರಿ ಅಬ್ದುಲ್ ಸಮದ್ ಸಮ್ಮೇಳನವನ್ನು ಉದ್ಘಾಟಿಸಲಿದ್ದಾರೆ. ರಾಜ್ಯ ನೌಕರರ ಸಂಘದ ಅಧ್ಯಕ್ಷ ಕೆ. ಎ. ಕೇಶವಮೂರ್ತಿ ಅಧ್ಯಕ್ಷತೆ ವಹಿಸುತ್ತಾರೆ. ಲೋಕಸಭಾ ಸದಸ್ಯ ಕೆ. ಲಕ್ಕಪ್ಪ ಪ್ರದರ್ಶನವನ್ನು ಉದ್ಘಾಟಿಸುತ್ತಾರೆ. ಅನೇಕ ನಾಯಕರು, ರಾಜ್ಯದಾದ್ಯಂತ ಸಾವಿರಾರು ಪ್ರತಿನಿಧಿಗಳು ಸಮ್ಮೇಳನದಲ್ಲಿ ಭಾಗವಹಿಸಲಿದ್ದಾರೆ. ●

 REG. KRNB-368 MAG (2) PRB DECR 319/78-79

ಮಾರಕಾಸ್ತ್ರಗಳನ್ನು ತಕ್ಷಣ ವಿಸರ್ಜಿಸಿ

(1ನೇ ಪುಟದಿಂದ)

ಹೋಯಿತು. ನನ್ನ ದೇಶದಲ್ಲೂ ಅದು ಬಲಗೊಂಡಿತು. ಆದರೆ ನಂತರ ಅಣ್ವಸ್ತ್ರ ವಿಸ್ತರಣಾ ನಿರೋಧ ಸಂಧಿ (NPT) ಬಂತು. ಇದರಿಂದ ಈ ಚಳು ವಳಿಗೆ ತಡೆಹಾಕಿದಂತಾಯಿತು. ಅಣ್ವಸ್ತ್ರಗಳ ಸಂಪೂರ್ಣ ನಾಶದ ಬದಲು ಹಂತ-ಹಂತವಾಗಿ ಕಡಿತ ಮಾಡುವ ಮಾತು ಕೇಳಬರಲಾರಂಭಿಸಿತು. ಅಣ್ವಸ್ತ್ರಗಳ ಸಂಗ್ರಹ ಬೆಳೆಯುತ್ತಾ ಹೋಯಿತು. ಅನಂತರ 1975ರಲ್ಲಿ ಅಮೇರಿಕಾ ಮೊದಲಾದ ದೇಶಗಳು ಒಡಂಬಡಿಕೆ (Detente) ಗೆ ಒಪ್ಪಿದರೂ ಕೂಡಾ ಶಸ್ತ್ರಾಸ್ತ್ರಗಳ ಖರ್ಚು ಹೆಚ್ಚುತ್ತಾ ಹೋಯಿತು. ಸಾಮ್ರಾಜ್ಯಶಾಹಿಗಳು ಕುತಂತ್ರದಿಂದ ಅಣ್ವಸ್ತ್ರಗಳಿಂದ ಸಜ್ಜಾದ ಯುದ್ಧ ಹಡಗುಗಳ ಮೂಲಕ ಬೆದರಿಸಿ, ತಮ್ಮ ಬಹುರಾಷ್ಟ್ರೀಯ ಸಂಸ್ಥೆಗಳ ಮೂಲಕ ಅಲಿಪ್ತದೇಶಗಳು, ದಕ್ಷಿಣ ಪೂರ್ವ ಏಷ್ಯಾ, ಮಧ್ಯಪೂರ್ವ ಹಾಗೂ ಆಫ್ರಿಕಾದಲ್ಲಿ ಅಸ್ಥಿರತೆ ಮತ್ತು ಅಶಾಂತಿಯನ್ನು ಹೆಚ್ಚಿಸುತ್ತಿವೆ.

ಸಾಮ್ರಾಜ್ಯಶಾಹಿ ಈಗ ತೀವ್ರ ಬಿಕ್ಕಟ್ಟಿನ ಪರಿಸ್ಥಿತಿಯನ್ನೆದುರಿಸುತ್ತಿದೆ. ಅದ್ದರಿಂದ ತನ್ನ ಉಳಿವಿಗಾಗಿ ಶಸ್ತ್ರಾಸ್ತ್ರಗಳ ಮೇಲೆ ಹೆಚ್ಚೆಚ್ಚು ಖರ್ಚು ಮಾಡುತ್ತಿದೆ. ಅಭಿವೃದ್ಧಿ ಹೊಂದುತ್ತಿರುವ ದೇಶಗಳು ಹಾಗೂ ಅಲ್ಲಿಯ ಜನರನ್ನು ಶೋಷಿಸುವ ಹೊಸ ಹೊಸ ವಿಧಾನಗಳನ್ನು ಹುಡುಕುತ್ತಿದೆ. ಜಗತ್ತಿನ ದುಡಿಯುವ ಜನತೆಯ ಐಕ್ಯತೆಯಿಂದ ಮಾತ್ರ ಸಾಮ್ರಾಜ್ಯಶಾಹಿಯ ಪಿತೂರಿಯನ್ನೆದುರಿಸಲು ಸಾಧ್ಯ.

ಈ ಸಂದರ್ಭದಲ್ಲಿ ಈ ಕರಡು ನಿರ್ಣಯದಲ್ಲಿ ನಿಶ್ಶಸ್ತ್ರೀಕರಣ ಹಾಗೂ ಶಾಂತಿಯ ಪರವಾದಿ ಕಾರ್ಯೋನ್ಮುಖರಾಗುವಂತೆ ಮಾಡುವಲ್ಲಿ ದುಡಿಯುವ ಜನರು ಹಾಗೂ ಇತರ ಶಾಂತಿಪ್ರಿಯ ಜನರು ವಹಿಸಬಹುದಾದ ಪಾತ್ರದ ಬಗ್ಗೆ ಪ್ರಸ್ತಾಪವಿಲ್ಲ ಎಂಬುದನ್ನು ಬೇಸರದಿಂದ ಹೇಳಲೇಬೇಕಾಗಿದೆ.

ಗೆಳೆಯರೇ, ಇದು ಈಗ ನಮ್ಮ ಗುರಿ."

○

ಎಸ್. ಎಫ್. ಐ. ಸದಸ್ಯರ ಗಮನಕ್ಕೆ

ಎಸ್. ಎಫ್. ಐ. ಕೇಂದ್ರ ಸಮಿತಿ ಕಚೇರಿಗೆ ಮತ್ತು ಸ್ಟೂಡೆಂಟ್ ಸ್ಟ್ರಗಲ್ ಪತ್ರಿಕೆಗೆ ಸಂಬಂಧಿಸಿದಂತೆ ಇನ್ನು ಮುಂದೆ ಈ ಕೆಳಕಂಡ ವಿಳಾಸಕ್ಕೆ ವ್ಯವಹರಿಸಬೇಕಾಗಿ ಕೋರಿದೆ.

ವಿಳಾಸ:

22, ವಿಠಲ್‌ಭಾಯಿ
ಪಟೇಲ್‌ಹೌಸ್, ರಫಿ ಮಾರ್ಗ್,
ನ್ಯೂ ಡೆಲ್ಲಿ-110001.

ಏಜನ್ಸಿದಾರರ, ಓದುಗರ ಗಮನಕ್ಕೆ

ದಿನಾಂಕ 5-10-80ರ ಪತ್ರಿಕೆಗಳು ತಲುಪಿಲ್ಲವೆಂದು ಅನೇಕ ಕಡೆಯಿಂದ ದೂರುಗಳು ಬಂದಿವೆ. ಪ್ರತಿಸಲದಂತೆ ನಾವು ಶನಿವಾರವೇ ಪತ್ರಿಕೆಗಳನ್ನು ಪೋಸ್ಟ್ ಮಾಡಿದ್ದೇವೆ. 4-10-80ರಂದು ಪೋಸ್ಟ್ ಮಾಡಿದ್ದರೂ ತಲುಪಿಲ್ಲದ ಕಾರಣ ಸಂಬಂಧಪಟ್ಟವರು ದಯವಿಟ್ಟು ತಮ್ಮ ಪೋಸ್ಟ್ ಆಫೀಸಿನಲ್ಲಿ ಈ ಬಗ್ಗೆ ದೂರು ಸಲ್ಲಿಸಬೇಕೆಂದು ಕೋರಲಾಗಿದೆ.

—ಸಂಪಾದಕ
ಐಕ್ಯರಂಗ.

ಸಹಕಾರಿ ಸಂಘದ ದೌರ್ಜನ್ಯ

ದ. ಕ. ಜಿಲ್ಲೆಯ ಉಜಿರೆಯ ಬೆಳಾಲು ಗ್ರಾಮದಲ್ಲಿ ಈರಮ್ಮ ಎಂಬ 84 ವರ್ಷದ ಮುದುಕಿ ಇದ್ದಾಳೆ. ಇವಳು ಕಾಡುಗುಡ್ಡೆ ಜನಾಂಗಕ್ಕೆ ಸೇರಿದವಳು. ಭೂಸ್ವಾಮಿ ಮಂಡಲಿಯವರು ಒಂದು ಎಕರೆ ಅರವತ್ತು ಗುಂಟೆ ಹೊಲವನ್ನು ಅವಳ ಹೆಸರಿಗೆ ದಾಖಲು ಮಾಡಿಕೊಡಿದ್ದಾರೆ ಬೆಳಾಲು ಸಹಕಾರ ಸಂಘದ 337ನೇ ನಂಬರಿನ ಸದಸ್ಯೆ ಈರಮ್ಮ ಈಗ ಮೂರು ನಾಲ್ಕು ವರ್ಷಗಳ ಹಿಂದೆ ಸಂಘದಿಂದ 400ರೂ. ಸಾಲ ಪಡೆದಿದ್ದಳು. ಕಳೆದ ವರ್ಷ ಸಂಘದವರು ಈರಮ್ಮನ ಮನೆ ಜಪ್ತಿ ಮಾಡಿದರು. ಹುಲ್ಲುಸೂಡಿ 300೦, ಪಾಡಿನಮುಳಿ ಹುಲ್ಲುಸೂಡಿ 4000, ಕಡೆಯುವಕಲ್ಲು 1, ನೊಗ 2, ಒನಕೆ 3, ಚೆಂಬು 1, ಸೈಗೋಲು 1, ಎತ್ತು 1, ಕತ್ತಿ 7-ಇವಿಷ್ಟನ್ನು ತೆಗೆದುಕೊಂಡು ಹೋಗಿದ್ದಾರೆ. ಅದರಲ್ಲಿ ಕೆಲವನ್ನು ನೆರೆದವರಿಗೆ ಉಚಿತವಾಗಿ ಹಂಚಿದರು. ಅಂತೂ ಸಾಲಕೊಟ್ಟ "ಸಹಕಾರಿ ಸಂಘ" 600 ರೂ.



ಸಾಮಾನು ತುಂಬಿಸಿಕೊಂಡಿತು. ಈರಮ್ಮನ ಹೊಲದ ಕತೆಯೇ ಮುಗಿದು ಹೋಯಿತು. ಆದರೂ ಸಾಲ ಮುಗಿಯಲಿಲ್ಲ. ಈಗ 1-8-80ನೇ ತಾರೀಕು ಹಸಿರು ಬಣ್ಣದ ಕಾರ್ಡ್ ಅವಳಿಗೆ ಬಂದಿದೆ. 400ರೂ. ಸಾಲ ಬಾಕಿ ಕಟ್ಟಬೇಕು ಎಂದು ಅದರಲ್ಲಿದೆ. ಸಹಕಾರಿ ಸಂಘದ ದೌರ್ಜನ್ಯಕ್ಕೆ ಮೇರ ಇಲ್ಲ.

ವರದಿ : ಕೆ. ವಿ. ರಾವ್, ಉಜಿರೆ

ಶಿವಮೊಗ್ಗ ರೈತ ಚಳುವಳಿಗೆ ಬೆಂಬಲ

ಮಲಪ್ರಭಾ ರೈತ ಚಳುವಳಿ ಪ್ರಾರಂಭವಾದಂದಿನಿಂದ ಕರ್ನಾಟಕ ರಾಜ್ಯದಲ್ಲಿ ಎಚ್ಚೆತ್ತ ರೈತರ ರಾಜ್ಯವ್ಯಾಪ್ತಿ ಚಳುವಳಿ ಕಂಡುಬರುತ್ತಿದೆ. ಬರಗಾಲ ಪೀಡಿತ ಪ್ರದೇಶದ ರೈತರು ಆದರಲ್ಲೂ ಕೋಲಾರ ಜಿಲ್ಲೆಯಲ್ಲಿ ವಿರೋಧಪಕ್ಷಗಳ ನೇತೃತ್ವದಲ್ಲಿ ಜಿಲ್ಲೆ ಯಾದ್ಯಂತ ಹೋರಾಟ ನಡೆಸಲು ಈಗಾಗಲೇ ಸಿದ್ಧತೆ ನಡೆಸಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ರೈತ ಕೃಷಿ ಕಾರ್ಮಿಕರ ಹೋರಾಟ ಪ್ರಾರಂಭವಾಗುತ್ತಿದೆ.

ಈ ಸಂದರ್ಭದಲ್ಲಿ ಶಿವಮೊಗ್ಗ ಜಿಲ್ಲೆಯ ರೈತರು ಕೆಲವು ಮುಖ್ಯ ಬೇಡಿಕೆಗಳನ್ನು ಮುಂದಿಟ್ಟುಕೊಂಡು, ಕರ್ನಾಟಕ ರಾಜ್ಯದಲ್ಲಿ ಬೃಹತ್ ಚಳುವಳಿಯನ್ನು ನಡೆಸಿ ಕೆಲವೇ ದಿನಗಳಲ್ಲಿ ಸಹಸ್ರಾರು ರೈತರು ರಾಜ್ಯದ ಎಲ್ಲ ಜೈಲುಗಳನ್ನು ತುಂಬಿಸಿದ್ದಾರೆ.

ಕರ್ನಾಟಕ ಪ್ರಾಂತ ರೈತಸಂಘದ ಅಧ್ಯಕ್ಷರಾದ ಕಾಂ. ಮುಗುವಾಳಪ್ಪ ಮತ್ತು ಖಜಾಂಚಿ ಪಿ. ಜಗನ್ನಾಥ ಅವರು ಶಿವಮೊಗ್ಗ ಜಿಲ್ಲೆಯ ರೈತ ಸಮನ್ವಯ ಸಮಿತಿ ಅಧ್ಯಕ್ಷ ಶ್ರೀ ರುದ್ರಪ್ಪ, ಕಾರ್ಯದರ್ಶಿ ಸುಂದರೇಶ್ ಮತ್ತಿತರರನ್ನು ಭೇಟಿಮಾಡಿ ವಿಚಾರ ವಿನಿಮಯ ಮಾಡಿದ್ದಾರೆ.

ಶಿವಮೊಗ್ಗ ಜಿಲ್ಲೆಯ ರೈತರ ನ್ಯಾಯುತ ಹೋರಾಟಕ್ಕೆ ಕರ್ನಾಟಕ ಪ್ರಾಂತ ರೈತಸಂಘವು ತನ್ನ ಸಂಪೂರ್ಣ ಬೆಂಬಲವನ್ನು ವ್ಯಕ್ತಪಡಿಸಿದೆ.

●

ಕಾರ್ಮಿಕ ವಿರೋಧಿ ನೀತಿಯ ಖಂಡನೆ

ದಿನಾಂಕ 24-9-80 ರಂದು ಕುದುರೆಮುಖದ ಎಚ್. ಎಸ್. ಸಿ. ಎಲ್. ಆಡಳಿತ ವರ್ಗವು ವಿನಾಕಾರಣವಾಗಿ 239 ಕುಶಲ (Skilled) ಕೆಲಸಗಾರರನ್ನು ಕೆಲಸದಿಂದ ವಜಾ ಮಾಡಿರುವುದನ್ನು ಸಿ. ಐ. ಟಿ. ಯು. ವಿನ ಕಾರ್ಯದರ್ಶಿ ಕಾಂ. ಎಂ. ಕೆ. ಪಂಧೆಯವರು ಉಗ್ರವಾಗಿ ಖಂಡಿಸಿದ್ದಾರೆ.

ತಾ. 3-10-80 ರಂದು ದೆಹಲಿಯಿಂದ ಇತ್ತ ಪತ್ರಿಕಾ ಪ್ರಕಟಣೆಯೊಂದರಲ್ಲಿ ಈ ವಿಷಯವನ್ನು ತಿಳಿಸುತ್ತಾ, ಎಚ್. ಎಸ್. ಸಿ. ಎಲ್. ನ ಎಲ್ಲಾ ಕೆಲಸಗಾರರು ಆಡಳಿತ ವರ್ಗದ ಈ ಹೇಯ ಕೃತ್ಯದ ವಿರುದ್ಧ ಒಗ್ಗಟ್ಟಾಗಿ ಹೋರಾಡಲು ಕರೆ ಕೊಟ್ಟಿದ್ದಾರೆ.

○

ಸಂಪಾದಕೀಯ

(1ನೇ ಪುಟದಿಂದ)

ದ್ದರೂ, ಒಂದಾಗಿ ಕಾರ್ಯಕ್ರಮಗಳ ಆಧಾರದಲ್ಲಿ ಹೋರಾಡಿದರೆ ಈ ತಪ್ಪು ಅಭಿಪ್ರಾಯವನ್ನು ಹೋಗಲಾಡಿಸಬಹುದು. ಎಡ ಪ್ರಜಾಪ್ರಭುತ್ವ ರಾಜಕೀಯದ ಮುನ್ನಡೆಯು ರೈತರ ಅಭಿವೃದ್ಧಿಗೂ ಅನುಕೂಲ ಎಂಬುದನ್ನು ಪ್ರಚಾರ, ಹೋರಾಟ ಮತ್ತು ಬೆಂಬಲಗಳ ಮೂಲಕ ತಿಳಿಸುವುದು ಅತ್ಯವಶ್ಯಕ.

ಇನ್ನು ಕಾರ್ಮಿಕವರ್ಗ ಅಥವಾ ನಗರದ ಎಲ್ಲ ಜನರೂ ತಮ್ಮ ವಿರೋಧಿಗಳೆಂದು ವಾದಿಸುವವರ ಮಾತಲ್ಲಿ ಹುರುಳಿಲ್ಲ ಎಂಬುದನ್ನು ತಿಳಿಯಪಡಿಸಬೇಕು. ಬಂಡವಾಳಶಾಹಿ ಪದ್ಧತಿ ಬೆಳೆಯುವಾಗ ನಗರ ಮತ್ತು ಹಳ್ಳಿಗಳೊಳಗೆ ತೀವ್ರ ಅಂತರವೇರ್ಪಡುತ್ತದೆ. ಆದರೆ ನಗರದ ಬಹುಸಂಖ್ಯಾತ ಬಡವರು ಜೀವನ ನಡೆಸುವುದೇ ಕಷ್ಟವಾಗುತ್ತದೆ. ಹಾಗೆಯೇ ಕೂಲಿಕಾರರು ಜೀವನಮಟ್ಟವನ್ನು ಸುಧಾರಿಸಲು ಸಂಘಟಿತ ಹೋರಾಟ ನಡೆಸುತ್ತಾರೆ. ಇವರ ಹೋರಾಟದಿಂದ ಬೆಲೆಏರಿಕೆಯಾಗುವುದು ಅಥವಾ ರೈತರಿಗೆ, ಹಳ್ಳಿಗರಿಗೆ ಅನ್ಯಾಯವಾಗುವುದೆಂಬುದು ಬಂಡವಾಳಗಾರರ ವಾದ. ರೈತರೆಲ್ಲಾ ಒಗ್ಗಟ್ಟಾಗಿ ಹೋರಾಡುವುದು ಸ್ವಾಗತಾರ್ಹ ಮತ್ತು ಎಲ್ಲಾ ಎಡ ಪ್ರಜಾಪ್ರಭುತ್ವ ಶಕ್ತಿಗಳು ಇದಕ್ಕೆ ಸಂಪೂರ್ಣ ಬೆಂಬಲವೀಯಬೇಕು. ಆದರೆ ಅದೇ ಸಂದರ್ಭದಲ್ಲಿ ಅತ್ಯಂತ ಶೋಷಣೆಗೊಳಗಾದ ಹಳ್ಳಿಯ ಬಡವರು, ಆಂದ್ರೆ, ಬಡರೈತರು, ಭೂಹೀನರು, ಕೃಷಿಕೂಲಿಗಾರರು ಆರ್ಥಿಕ ಸಾಮಾಜಿಕವಾಗಿ ಅತ್ಯಂತ ತುಳಿತಕ್ಕೊಳಗಾದವರ ಬಗ್ಗೆ ಚಿಂತನೆ, ಅವರ ಸಂಘಟನೆ ಮತ್ತು ಹೋರಾಟವನ್ನು ಬೆಳೆಸುವುದು ಇನ್ನೂ ಪ್ರಾಮುಖ್ಯ.

●

ಯಾರ ಸರಕಾರ ಜನತೆಯಿಂದ ದೂರ ಸರಿಯುತ್ತಲಿದೆ?

(1ನೇ ಪುಟದಿಂದ)

ಸ್ಪಷ್ಟವಾಗುತ್ತಲಿದೆ. ಅತೃಪ್ತ ಜನತೆ ಹೋರಾಟದ ಹಾದಿಯನ್ನು ಅನುಸರಿಸುತ್ತಿದೆ. ಇದನ್ನು ತಿಳಿದೇ ಇಂದಿರಾ ಗಾಂಧಿ ಸರಕಾರವು ತನ್ನ ಭದ್ರತೆಗಾಗಿ ರಾಷ್ಟ್ರೀಯ ಭದ್ರತಾ ಸುಗ್ರೀವಾಜ್ಞೆಯನ್ನು ಹೊರಡಿಸಿದ್ದಾಗಿದೆ.

ಇಂದು ರಾಷ್ಟ್ರಮಟ್ಟದಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ನಿರ್ಣಾಯಕ ಪಾತ್ರವನ್ನು ವಹಿಸುವ ಪರಿಸ್ಥಿತಿ ಉಂಟಾಗುತ್ತಿದೆ ಎಂಬುದರ ಅರಿವು ಇಂದಿರಾಗಾಂಧಿಯವರು ಎಡ ಮತ್ತು ಎಡ ಪ್ರಜಾಪ್ರಭುತ್ವ ಸರಕಾರಗಳ ಮೇಲೆ ಹೊಗೆ ಕಾರುವಂತೆ ಮಾಡುತ್ತಿದೆ. ದೇಶದ ಗುತ್ತೇದಾರಿ ಬಂಡವಾಳಗಾರ ನಿಯಂತ್ರಿತ ಪತ್ರಿಕೆಗಳೂ ಇಂದಿರಾಗಾಂಧಿಗೆ ಈ ಕೆಲಸದಲ್ಲಿ ಅತ್ಯಂತ ಹೆಚ್ಚಿನ ಸಹಾಯವೆಸಗುತ್ತಿವೆ.

●

ನಿರ್ದೇಶಕರ ಬಳಿ ಎಸ್. ಎಫ್. ಐ. ನಿಯೋಗ

ದಿನಾಂಕ 9-10-80 ರಂದು ಎಸ್.ಎಫ್.ಐ.ನ ನಿಯೋಗವೊಂದು ತಾಂತ್ರಿಕ ಶಿಕ್ಷಣ ಉಪನಿರ್ದೇಶಕರನ್ನು ಭೇಟಿ ಮಾಡಿ ಮಂಗಳೂರಿನ ಕರ್ನಾಟಕ ಪಾಲಿಟೆಕ್ನಿಕ್ ಮತ್ತು ಮಹಿಳಾ ಪಾಲಿಟೆಕ್ನಿಕ್ ವಿದ್ಯಾರ್ಥಿಗಳ ಸಮಸ್ಯೆಗಳ ಬಗ್ಗೆ ಚರ್ಚೆ ನಡೆಸಿತು. ಉಪನಿರ್ದೇಶಕರು ಈ ಸಮಸ್ಯೆಗಳ ಬಗ್ಗೆ ತಕ್ಷಣ ಗಮನಹರಿಸಿ ಪರಿಹರಿಸುವುದಾಗಿ ಭರವಸೆ ನೀಡಿದರು.

ದಿನಾಂಕ 10-10-80 ರಂದು ಎಸ್. ಎಫ್. ಐ. ನ ನಿಯೋಗವೊಂದು ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತರ ಇಲಾಖೆ ಉಪನಿರ್ದೇಶಕರನ್ನು ಭೇಟಿ ಮಾಡಿ ರಾಯಚೂರಿನ ಬಿ. ಸಿ. ಎಂ. ಹಾಸ್ಟೆಲ್‌ನಲ್ಲಿ ಕಳೆದ ವರ್ಷದ 32 ವಿದ್ಯಾರ್ಥಿಗಳಿಗೆ ತಕ್ಷಣ ಪ್ರವೇಶ ನೀಡಬೇಕೆಂದು ಒತ್ತಾಯಿಸಲಾಯಿತು. ರಾಯಚೂರು ಜಿಲ್ಲಾಧಿಕಾರಿಗಳಿಂದ ವರದಿ ತರಿಸಿ ತಕ್ಷಣ ಕ್ರಮ ತೆಗೆದುಕೊಳ್ಳುವುದಾಗಿ ಉಪನಿರ್ದೇಶಕರು ಭರವಸೆ ನೀಡಿದರು.

○

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560003, and Published by him on behalf of the Communist Party of India (Marxist) Karnataka State Committee, L-56, K. V. Temple Street, Sultanpet, Bangalore-560 053.
Editorial and managerial office : L-56, K. V. Temple Street, Sultanpet, Bangalore-560 053. Phone : 24154
EDITOR : M. K. BHAT